ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ, ಬೆಂಗಳೂರು

RAJIV GANDHI UNIVERSITY OF HEALTH SCIENCES, KARNATAKA, BENGALURU

4th T Block, Jayanagar, Bengaluru – 560 041

ಸಂಖ್ಯೆ. ಆರ್‌ಜಿಯು/ಪ್ರಾಧಿಕಾರ/ವಿಶೇಷ ಸಿಂಡಿಕೇಟ್/175/2022-23 ದಿನಾಂಕ. 23.02.2023

ದಿನಾಂಕ 13.02.2023ರಂದು ಬೆಳಿಗ್ಗೆ 11.00 ಗಂಟೆಗೆ ನಡೆದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳು :

**<u>ಹಾಜರಿದ್ದ ಸದಸ್ಯರುಗಳು :</u>**

| | | |
|---|---|---|
| 1. | ಡಾ. ಎಂ.ಕೆ.ರಮೇಶ್<br>ಕುಲಪತಿಗಳು, ರಾ.ಗಾ.ಆ.ವಿ.ವಿಶ್ವವಿದ್ಯಾಲಯ | ಅಧ್ಯಕ್ಷರು |
| 2. | ಪ್ರಧಾನ ಕಾರ್ಯದರ್ಶಿಗಳು<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ<br>ಕರ್ನಾಟಕ ಸರ್ಕಾರ | ಪದನಿಮಿತ್ತ ಸದಸ್ಯರು |
| 3. | ಕಾರ್ಯದರ್ಶಿಗಳು<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ<br>(ವೈದ್ಯಕೀಯ ಶಿಕ್ಷಣ), ಕರ್ನಾಟಕ ಸರ್ಕಾರ | ಪದನಿಮಿತ್ತ ಸದಸ್ಯರು |
| 4. | ನಿರ್ದೇಶಕರು<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ (ವೈದ್ಯಕೀಯ ಶಿಕ್ಷಣ) ಇಲಾಖೆ, ಕರ್ನಾಟಕ ಸರ್ಕಾರ | ಪದನಿಮಿತ್ತ ಸದಸ್ಯರು |
| 5. | ನಿರ್ದೇಶಕರು<br>ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ | ಪದನಿಮಿತ್ತ ಸದಸ್ಯರು |
| 6. | ಆಯುಕ್ತರು<br>ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ | ಪದನಿಮಿತ್ತ ಸದಸ್ಯರು |
| 7. | ಡಾ. ಶಿವಕುಮಾರ್ ಬಿ. ಲಕ್ಕೋಲ್<br>ಅಧ್ಯಕ್ಷರು, ಭಾರತೀಯ ವೈದ್ಯ ಪರಿಷತ್ ಸಂಘ<br>ಕರ್ನಾಟಕ ರಾಜ್ಯ ಶಾಖೆ | ಪದನಿಮಿತ್ತ ಸದಸ್ಯರು |
| 8. | ಡಾ. ಆನಂದ ಎಸ್. ಕಿರಿಶಾಲ್<br>ಶ್ರೀ ವೆಂಕಟೇಶ್ವರ ಹಾಸ್ಪಿಟಲ್<br>ಗಾಂಧಿನಗರ, ೨ನೇ ಅಡ್ಡರಸ್ತೆ, ಬಳ್ಳಾರಿ | ಸದಸ್ಯರು |
| 9. | ಡಾ. ಮೋನಿಕಾ ಕೃಷ್ಣಪ್ಪ<br># ಎಂಬಿ 803, ೮ನೇ ಮಹಡಿ, ಬಿ ವಿಂಗ್, ಮಾಪೆಲ್ ಬ್ಲಾಕ್ ಗೋಲ್ಡನ್ ಗ್ರಾಂಡ್ ಅಪಾರ್ಟ್‌ಮೆಂಟ್, ಯಶವಂತಪುರ ಬೆಂಗಳೂರು- 560 022. | ಸದಸ್ಯರು |
| 10. | ಡಾ. ಪಾಂಡು<br># 449, ೮ನೇ ಮುಖ್ಯರಸ್ತೆ, ಐಟಿಐ ಲೇಔಟ್, ಮಲ್ಲತಹಳ್ಳಿ<br>ಬೆಂಗಳೂರು | ಸದಸ್ಯರು |

ಕುಲಸಚಿವರು ಕುಲಪತಿಗಳು

| | | |
|---|---|---|
| 11. | ಪ್ರೊ. ಎಸ್.ರಾಮಚಂದ್ರ ಶೆಟ್ಟಿ<br>ಪ್ರಾಂಶುಪಾಲರು, ಸರ್ಕಾರಿ ಫಾರ್ಮಸಿ ಕಾಲೇಜು<br>ಬೆಂಗಳೂರು | ಸದಸ್ಯರು |
| 12. | ಡಾ. ರಮೇಶ್ ಎನ್. ರೆಡ್ಡಿ<br>ಪ್ರಾಂಶುಪಾಲರು, ಆಕಾಶ್ ಇನ್ಸ್ಟಿಟ್ಯೂಟ್ ಆಫ್ ಅಲೈಡ್<br>ಹೆಲ್ತ್ ಸೈನ್ಸಸ್, ಬೆಂಗಳೂರು | ಸದಸ್ಯರು |
| 13. | ಡಾ. ಕೃಷ್ಣ ಪ್ರಸಾದ್ ಎಮ್. ಎಸ್<br>ಡೀನ್, ಸುಬ್ಬಯ್ಯ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್<br>ಸೈನ್ಸಸ್, ಶಿವಮೊಗ್ಗ | ಸದಸ್ಯರು |
| 14. | ಡಾ. ಸ್ಮಿತಾ ಸೇಗು<br>ಪ್ರಾಧ್ಯಾಪಕರು, ಪ್ಲಾಸ್ಟಿಕ್ ಸರ್ಜರಿ ವಿಭಾಗ<br>ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು<br>ಸಂಶೋಧನಾ ಸಂಸ್ಥೆ, ಬೆಂಗಳೂರು | ಸದಸ್ಯರು |
| 15. | ಡಾ. ನಾಗೇಶ್ ಎನ್. ಎಸ್<br>ನಿರ್ದೇಶಕರು, ಇನ್ಸ್ಟಿಟ್ಯೂಟ್ ಆಫ್<br>ಗ್ಯಾಸ್ಟ್ರೋಎಂಟ್ರಾಲಜಿ ಸೈನ್ಸಸ್ ಅಂಡ್ ಆರ್ಗನ್<br>ಟ್ರಾನ್ಸ್ ಪ್ಲಾಂಟ್, ಬೆಂಗಳೂರು | ಸದಸ್ಯರು |
| 16. | ಡಾ. ಎಮ್.ಆರ್.ರವಿಕುಮಾರ್<br>ಕಣ್ಣಿನ ತಜ್ಞರು, ಎಂ.ಎಂ. ಹಾಸ್ಪಿಟಲ್, ಕುಣಿಗಲ್ | ಸದಸ್ಯರು |
| 17. | ಡಾ. ಕೆ. ವೆಂಕಟಗಿರಿ<br>ಹಿಂದಿನ ಸೆನೆಟ್ ಸದಸ್ಯರು,<br>ರಾ.ಗಾ.ಆ.ವಿ.ವಿಶ್ವವಿದ್ಯಾಲಯ | ಸದಸ್ಯರು |
| 18. | ಡಾ. ಜಗದೀಶ್<br># 687, 9ನೇ 'ಎ' ಮುಖ್ಯ.ರಸ್ತೆ<br>1ನೇ ಫೇಸ್, ಇಂದಿರಾನಗರ<br>ಬೆಂಗಳೂರು- 560 038 | ಸದಸ್ಯರು |
| 19. | ಡಾ. ವೇಣುಗೋಪಾಲ್<br>ಪವನ್ ಹಾಸ್ಪಿಟಲ್, ಶ್ರೀನಿವಾಸಪುರ<br>ಕೋಲಾರ | ಸದಸ್ಯರು |
| 20. | ಡಾ. ರವಿಕುಮಾರ್ ಬಿ.ಎನ್<br># 193/26, 2ನೇ ಅಡ್ಡ ರಸ್ತೆ, 6ನೇ ಬ್ಲಾಕ್<br>ಜಯನಗರ, ಬೆಂಗಳೂರು | ಸದಸ್ಯರು |
| 21. | ಡಾ. ಕ್ರಾಂತಿ ಕಿರಣ್<br>ಶ್ರೀ ಬಾಲಾಜಿ ಇನ್ಸ್ಟಿಟ್ಯೂಟ್ ಆಫ್ ನ್ಯೂರೂ ಸೈನ್ಸಸ್ &<br>ಟ್ರಾಮಾ, ಉಣಕಲ್, ಹೊಸೂರು ರಸ್ತೆ<br>ವಿದ್ಯಾ ನಗರ, ಹುಬ್ಬಳ್ಳಿ | ಸದಸ್ಯರು |
| 22. | ಡಾ. ಶೋಭಾ ಎಸ್. ನಿಸ್ಸೀಮಗೌಡ<br>ಮನ್ನಗಿ ಗ್ರಾಮ, ಸಾವನೂರ್ ತಾಲ್ಲೂಕು<br>ಹಾವೇರಿ ಜಿಲ್ಲೆ- 518 202 | ಸದಸ್ಯರು |

ಕುಲಸಚಿವರು

ಕುಲಪತಿಗಳು

| | | |
|---|---|---|
| 23. | ಡಾ. ಹೆಚ್.ಜೆ. ಜೈಕೃಷ್ಣ<br># 292, ಜೈನಿಲಯ, 19ನೇ ಮುಖ್ಯರಸ್ತೆ, 6ನೇ ಹಂತ<br>ಕೋರಮಂಗಲ, ಬೆಂಗಳೂರು-560 034 | ಸದಸ್ಯರು |
| 24. | ಶ್ರೀ ಬಸವರಾಜು ಎ.ಬಿ, ಭಾ .ಆ.ಸೇ<br>ಕುಲಸಚಿವರು, ರಾ.ಗಾ.ಆ.ವಿ.ವಿಶ್ವವಿದ್ಯಾಲಯ<br>ಬೆಂಗಳೂರು | ಪದನಿಮಿತ್ತ ಸದಸ್ಯರು |

**<u>ಸಭೆಗೆ ಗೈರು ಹಾಜರಾದ ಸದಸ್ಯರು :</u>**

| | | |
|---|---|---|
| 1. | ಡಾ. ಕಂಚಿ ಪ್ರಹ್ಲಾದ್. ವಿ<br>ಅಧ್ಯಕ್ಷರು, ಕರ್ನಾಟಕ ವೈದ್ಯಕೀಯ ಪರಿಷತ್ | ಪದನಿಮಿತ್ತ ಸದಸ್ಯರು |

ವಿಶ್ವವಿದ್ಯಾಲಯದ ಕುಲಸಚಿವರು ಗೌರವಾನ್ವಿತ ಕುಲಪತಿಗಳನ್ನು ಹಾಗೂ ಮಾನ್ಯ ಸಿಂಡಿಕೇಟ್ ಸದಸ್ಯರುಗಳನ್ನು ವಿಶೇಷ ಸಿಂಡಿಕೇಟ್ ಸಭೆಗೆ ಸ್ವಾಗತಿಸಿದರು ಹಾಗೂ ಗೌರವಾನ್ವಿತ ಕುಲಪತಿಯವರಿಗೆ ಸಭೆಯ ಅಧ್ಯಕ್ಷತೆಯನ್ನು ವಹಿಸಿ ನಡವಳಿಗಳನ್ನು ನಡೆಸಲು ಕೋರಿದರು.

ಗೌರವಾನ್ವಿತ ಕುಲಪತಿಯವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರುಗಳನ್ನು ವಿಶ್ವವಿದ್ಯಾಲಯದ ವಿಶೇಷ ಸಿಂಡಿಕೇಟ್ ಸಭೆಗೆ ಸ್ವಾಗತಿಸಿದರು ಹಾಗೂ ಸೆನೆಟ್‌ನಿಂದ ಸಿಂಡಿಕೇಟ್‌ಗೆ ಹೊಸದಾಗಿ ನೇಮಕಗೊಂಡಿರುವ 3 ಸದಸ್ಯರುಗಳಿಗೆ ಹೂಗುಚ್ಛ ನೀಡುವುದರ ಮೂಲಕ ಸಭೆಗೆ ಸ್ವಾಗತಿಸಿದರು. ತದನಂತರ ಕಾರ್ಯಸೂಚಿಯನ್ನು ಸಭೆಯ ಮುಂದೆ ಮಂಡಿಸಿದರು.

| | |
|---|---|
| **1** | To consider the E-mail representations received from the members of Syndicate. |
| (1) | Calendar of Events for all courses. |
| ಸಿಂಡಿಕೇಟ್ ನಿರ್ಣಯ | Deferred. |
| (2) | Regarding start of fresh courses – Time table, Guidelines, Minimum Standard Requirements (deviation). |
| ಸಿಂಡಿಕೇಟ್ ನಿರ್ಣಯ | Deferred. |
| (3) | To discuss about previous Syndicate proceedings on verified compliance documents to start fresh colleges according to Statute 2.19. |
| ಸಿಂಡಿಕೇಟ್ ನಿರ್ಣಯ | It was left to the discretion of Hon'ble Vice-Chancellor under the Statutes 2.19. |

**ಕುಲಸಚಿವರು** **ಕುಲಪತಿಗಳು**

| | |
|---|---|
| (4) | To discuss about functioning of Regional Centres. |
| ಚರ್ಚೆ | Hon'ble Vice-Chancellor brifed about the establishment of following regional centres under RGUHS. He also mentioned that Regional Centres with Skill labs, Sports Complex, Research Activities and other facilities will be established in six centres across the State.<br><br>**<u>Gulbarga</u>**<br><br>Gulbarga Urban Development Authority has allotted CA Site No. PL-06 in SY No. 80/3 to an extent of 54,474 Sq.ft in Sahara group Housing Scheme layout on lease basis to the university for Establishment of Regional Centre at Gulburga, for lease amount of Rs. 40,85,550/-. The Regional Centre Building was built on the said land. The regional Centre Building was inaugurated by the Hon`ble Minister for Medical Education on 21.02.2021.<br><br>Meanwhile, another CA site opposite to the existing building was allotted to the University by Gulbarga Urban Development Authority for the future expansion of the Regional centre of RGUHS with a measurement of 61296.70 Sq.ft on lease basis for Rs.1,31,02,169/-. The said land was taken into possession by the University and tender is under process for construction of Compound work to the new land.<br><br>**<u>Belgaum</u>**<br><br>Belgavi Urban development Authority has allotted a land to an extent of 3,675.31 Sq.mts of C A Site Scheme No. 35+43+43A, SY No. 576,577 & 578 of land in Ramathirtanagar for establishment of Regional Centre at Belgaum, for a lease amount of Rs, 1,99,36,350/- For Construction of Regional Centre at Belgaum, tender was invited at Rs.13,65,00,000/- and Tender was cancelled due to Syndicate, members opined that the said land is in the residential area and needs to be changed to some other place.<br><br>During the Emergency Syndicate meeting held on 23.08.2022, it was decided to retain the said land and decided to construct the compound to the said land.<br><br>**<u>Davanagere</u>**<br><br>The Deputy Commissioner, Davangere has allotted 2(Two) Acres of land at Sy.No. 125, Anagodu village, Davangere for establishment of Regional Centre at Davnagere. The University has taken the possession of the said land and constructed Compound wall. The Construction of Regional Centre on the said land is under progress. |

ಕುಲಸಚಿವರು

ಕುಲಪತಿಗಳು

| | |
|---|---|
| | **Mangalore**<br><br>The Assistant Commissioner, Mangaluru vide his letter No.LND PDR: 96/2019-20 dated 09.10.2019, has allotted an extent of 1.00 Acres land at Sy.No. 144/3 in Kavoor village, Mary Hill, Surathkal Hobli, Mangaluru to RGUHS at free of cost for establishment of University Regional centre. The said land was handed over to the University on 27.11.2019 and compound wall was constructed. During Syndicate meeting held on 26.03.2021, the Master plan was approved with an estimate of Rs. 4500.00 lakhs.<br><br>The detailed estimate submitted by the Architects M/s Sundram Architects was placed before the 22nd Technical and Tender Scrutiny Committee meeting held on 02.02.2023, where the Committee perused the estimate in detail and same was recommended for approval with some modification. This has been approved by the Syndicate. The tender will be invited shortly through E-portal.<br><br>Two more centres will be started in Mysore and Hubli. |
| ಸಿಂಡಿಕೇಟ್ ನಿರ್ಣಯ | The Syndicate approved the proposals and reemphasised that the Regional Centres shall have Advanced Skill Labs, facilities for Sports and Research. |
| (5) | To discuss about Finance matters for various Activities/Projects under RGUHS statute 2.2 (v). |
| ಸಿಂಡಿಕೇಟ್ ನಿರ್ಣಯ | Deferred. |
| (6) | Regarding Grievances on different issues – dissemination of information (Statute 2.2 (2) actions taken under section 13(2) etc. |
| ಸಿಂಡಿಕೇಟ್ ನಿರ್ಣಯ | It was decided that there are no grievances and hence, the matter is disposed off. |
| 7. | Transfer of funds to Bheemanakuppe project / As per Government Order No. AKUKA 15 RGU 2019, Bangalore, Dated 01.02.2023 for project of Medical College and construction of RGUHS (University) campus at Ramanagara. |
| ಚರ್ಚೆ | ಗೌರವಾನ್ವಿತ ಕುಲಪತಿಗಳು ರಾಮನಗರ ಜಿಲ್ಲೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ನಿರ್ಮಿಸಲು ನಿರ್ಣಯಿಸಿರುವ ಬಗ್ಗೆ ಸವಿಸ್ತಾರವಾಗಿ ಸಭೆಯಲ್ಲಿ ವಿವರಿಸಿದರು. ಗೌರವಾನ್ವಿತ ಕುಲಪತಿಗಳು ಅರ್ಚಕರ ಹಳ್ಳಿ, ರಾಮನಗರ ಜಿಲ್ಲೆಯಲ್ಲಿ |

ಕುಲಸಚಿವರು

ಕುಲಪತಿಗಳು

| | |
|---|---|
| | ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ನಿರ್ಮಿಸುವ ಬಗೆಗಿನ ಇತಿಹಾಸವನ್ನು ಸಭೆಯಲ್ಲಿ ಮಂಡಿಸಿದರು.<br><br>ರಾಮನಗರ ಜಿಲ್ಲೆಯನ್ನು ಕರ್ನಾಟಕ ರಾಜ್ಯದಲ್ಲಿ ಪ್ರತ್ಯೇಕ ಜಿಲ್ಲೆಯಾಗಿ ಘೋಷಿಸಿದ ನಂತರ ಕರ್ನಾಟಕ ರಾಜ್ಯ ಸರ್ಕಾರವು 1994ರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮವನ್ನು ತಿದ್ದುಪಡಿ ಮಾಡಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕೇಂದ್ರ ಸ್ಥಾನವನ್ನು ಬೆಂಗಳೂರು ಜಿಲ್ಲೆಯಿಂದ ರಾಮನಗರ ಜಿಲ್ಲೆಗೆ ಸ್ಥಳಾಂತರಿಸಲು ಗೆಜೆಟ್ ಅಧಿಸೂಚನೆ ಸಂಖ್ಯೆ. ಸಂವ್ಯಶಾಖೆ 25 ಶಾಸನ 2007 ಬೆಂಗಳೂರು ದಿನಾಂಕ 10ನೇ ಆಗಸ್ಟ್ 2007ರಂತೆ ಆದೇಶಿಸಲಾಯಿತು.<br><br>ದಿನಾಂಕ 16.03.2007ರ ಸಿಂಡಿಕೇಟ್ ಸಭೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ರಾಮನಗರ ಜಿಲ್ಲೆಗೆ ಸ್ಥಳಾಂತರಿಸಲು ತಾತ್ವಿಕವಾಗಿ ಅನುಮೋದಿಸಲಾಯಿತು.<br><br>ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ಯಾಂಪಸ್ ಮತ್ತು ಹೆಲ್ತ್ ಸಿಟಿ ಕಾಂಪ್ಲೆಕ್ಸ್ ಅನ್ನು ನಿರ್ಮಿಸಲು 2007ನೇ ಸಾಲಿನ ಬಜೆಟ್ ಅನುದಾನದಲ್ಲಿ ರೂ. 310 ಕೋಟಿ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರದ ಪತ್ರದ ದಿನಾಂಕ 14.05.2007ರಲ್ಲಿ ತಿಳಿಸಲಾಯಿತು. ಇದರಂತೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವತಿಯಿಂದ ರೂ. 120 ಕೋಟಿಗಳನ್ನು, ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ 110 ಕೋಟಿಗಳನ್ನು ಮತ್ತು ಕೇಂದ್ರ ಸರ್ಕಾರದ ವತಿಯಿಂದ ರೂ. 80 ಕೋಟಿಗಳ ಅನುದಾನವನ್ನು ಎರಡು ವರ್ಷಗಳ ಅಂದರೆ 2007-08 ಮತ್ತು 2008-09ನೇ ಸಾಲಿನಲ್ಲಿ ಬಿಡುಗಡೆ ಮಾಡಲು ಸೂಚಿಸಲಾಯಿತು.<br><br>ಕರ್ನಾಟಕ ರಾಜ್ಯ ಸರ್ಕಾರವು 71 ಎಕರೆ 15 ಗುಂಟೆ ಜಮೀನನ್ನು ಅರ್ಚಕರ ಹಳ್ಳಿ, ರಾಮನಗರ ತಾಲ್ಲೂಕು ಇಲ್ಲಿ ಸರ್ಕಾರದ ಆದೇಶ ಸಂಖ್ಯೆ. ಹೆಚ್‌ಎಫ್‌ಡಬ್ಲ್ಯೂ/196/ಎಂಪಿಎಸ್/2006 ದಿನಾಂಕ 18.08.2007ರಂತೆ ವಿಶ್ವವಿದ್ಯಾಲಯದ ಆಡಳಿತ ಕಟ್ಟಡವನ್ನು ನಿರ್ಮಿಸಲು ಮಂಜೂರು ಮಾಡಿ ಆದೇಶಿಸಲಾಯಿತು. ಆದರೆ ಸದರಿ ಜಮೀನು ನ್ಯಾಯಾಲಯದಲ್ಲಿ ವ್ಯಾಜ್ಯಪೂರಿತವಾಗಿದ್ದನ್ನು ಸಭೆಗೆ ತಿಳಿಸಲಾಯಿತು.<br><br>ದಿನಾಂಕ 27.09.2007ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಒಮ್ಮತದಿಂದ ನಿರ್ಣಯಿಸಿದಂತೆ ಸದರಿ ಜಮೀನು ವ್ಯಾಜ್ಯಪೂರಿತವಾಗಿರುವುದರಿಂದ ವಿಶ್ವವಿದ್ಯಾಲಯವು ಸದರಿ ಜಮೀನನ್ನು ನ್ಯಾಯಾಲಯದಲ್ಲಿ ವ್ಯಾಜ್ಯ ಮುಕ್ತ ಆಗುವವರೆಗೆ ಮತ್ತು ವಿಶ್ವವಿದ್ಯಾಲಯದ ಮೂಲ ಮನವಿಯಂತೆ ಹಸ್ತಾಂತರಗೊಳ್ಳುವವರೆಗೆ ವಿಶ್ವವಿದ್ಯಾಲಯವು ಸ್ವಾಧೀನ ಪಡೆದು ಕೊಳ್ಳಬಾರದೆಂದು ತೀರ್ಮಾನಿಸಲಾಯಿತು.<br><br>ಸದರಿ ಸಿಂಡಿಕೇಟ್ ನಿರ್ಣಯದಂತೆ ಅರ್ಚಕರಹಳ್ಳಿ, ರಾಮನಗರ ಜಿಲ್ಲೆಯ ಸದರಿ ಜಮೀನನ್ನು ವಿಶ್ವವಿದ್ಯಾಲಯವು ಸ್ವಾಧೀನ ಪಡೆದು |

ಕುಲಸಚಿವರು

ಕುಲಪತಿಗಳು

| | |
|---|---|
| | ಕೊಂಡಿರುವುದಿಲ್ಲ ಎಂದು ಸಭೆಗೆ ತಿಳಿಸಲಾಯಿತು. ಇದೇ ಸಂದರ್ಭದಲ್ಲಿ ಕೆಲವು ಜಮೀನಿನ ಮಾಲೀಕರು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ. 12670/2007 ಮತ್ತು ಇತರೆ ದಾವೆಗಳನ್ನು ಸಲ್ಲಿಸಿ ಮಧ್ಯಂತರ ಆದೇಶದಂತೆ ಪ್ರತಿಬಂಧಕಾಜ್ಞೆಯನ್ನು ಪಡೆದುಕೊಂಡಿರುತ್ತಾರೆ. ಆದರೆ ಗೌರವಾನ್ವಿತ ಉಚ್ಚ ನ್ಯಾಯಾಲಯದ ಆದೇಶ ದಿನಾಂಕ 30.07.2008ರಂತೆ ಸದರಿ ವ್ಯಾಜ್ಯವು ವಜಾಗೊಂಡಿರುತ್ತದೆ. ತದನಂತರ ಜಮೀನಿನ ಮಾಲೀಕರು ಗೌರವಾನ್ವಿತ ಉಚ್ಚ ನ್ಯಾಯಾಲಯದ ಏಕಸದಸ್ಯ ಪೀಠದ ಆದೇಶವನ್ನು ಪ್ರಶ್ನಿಸಿ ಗೌರವಾನ್ವಿತ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿ ದಾವೆ ಸಂಖ್ಯೆ 1360/2008 ಮತ್ತು ಇತರೆ ವ್ಯಾಜ್ಯಗಳನ್ನು ಸಲ್ಲಿಸಿರುತ್ತಾರೆ.<br><br>ದಿನಾಂಕ 09.11.2010ರಲ್ಲಿ ನಡೆದ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಿರುವಂತೆ ಪಿಡಬ್ಲೂಡಿ ಪ್ರಾಧಿಕಾರದಿಂದ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದ ಮಾಸ್ಟರ್ ಪ್ಲಾನ್ ಅನ್ನು ಪರಿಶೀಲಿಸಿದ ನಂತರ ಸದರಿ ಸಿಂಡಿಕೇಟ್ ಸಭೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ. ಹೆಚ್ ಎಫ್ ಡಬ್ಲೂ 196 ಎಂಪಿಎಸ್ 2006 (ಬಿ) ಬೆಂಗಳೂರು ದಿನಾಂಕ 18.08.2007ರ ಆದೇಶದಂತೆ ಅರ್ಚಕರ ಹಳ್ಳಿ ರಾಮನಗರ ಜಿಲ್ಲೆ ಇಲ್ಲಿ 71 ಎಕರೆ 15 ಗುಂಟೆ ಜಮೀನನ್ನು ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣ ಮಾಡಲು ಮಂಜೂರು ಮಾಡಿರುವಂತೆ ಸದರಿ ಜಮೀನನ್ನು ವಿಶ್ವವಿದ್ಯಾಲಯಕ್ಕೆ ವ್ಯಾಜ್ಯಮುಕ್ತ ಹಾಗೂ ಋಣಮುಕ್ತ ಜಮೀನನ್ನು ಉಚಿತವಾಗಿ ವಿಶ್ವವಿದ್ಯಾಲಯಕ್ಕೆ ಹಸ್ತಾಂತರ ಮಾಡುವಂತೆ ಪತ್ರ ಬರೆಯಲು ನಿರ್ಣಯಿಸಲಾಯಿತು. ಇದರಂತೆ ಸದರಿ ಜಮೀನನ್ನು ಸ್ವಾಧೀನ ಪಡೆದುಕೊಂಡ ನಂತರವೇ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಿಸಲು ವಿಶ್ವವಿದ್ಯಾಲಯದ ವತಿಯಿಂದ ಸೂಕ್ತ ಕಾರ್ಯಕ್ರಮ ರೂಪುರೇಷೆ ಮಾಡುವಂತೆ ತೀರ್ಮಾನಿಸಲಾಯಿತು ಎಂದು ಸಭೆಗೆ ತಿಳಿಸಿದರು.<br><br>ಸದರಿ ಜಮೀನಿಗೆ ಸಂಬಂಧಿಸಿದಂತೆ ಹಲವು ಜಮೀನಿನ ಮಾಲೀಕರು ಗೌರವಾನ್ವಿತ ಉಚ್ಚ ನ್ಯಾಯಾಲಯದ ಏಕಸದಸ್ಯ ಪೀಠದ ಆದೇಶವನ್ನು ಪ್ರಶ್ನಿಸಿ ವಿಭಾಗೀಯ ಪೀಠದಲ್ಲಿ ದಾವೆ ಸಲ್ಲಿಸಿದ್ದು ಸದರಿ ದಾವೆಯನ್ನು ವಿಭಾಗೀಯ ಪೀಠವು ದಿನಾಂಕ 08.06.2011ರಂದು ವಜಾಗೊಳಿಸಿ ಆದೇಶಿಸಿರುತ್ತದೆ.<br><br>ಮುಂದುವರೆದು, ಸದರಿ ಜಮೀನಿನ ಮಾಲೀಕರು ಗೌರವಾನ್ವಿತ ಉಚ್ಚ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಎಸ್ಎಲ್‌ಪಿ (ಸಿವಿಲ್) ಸಂಖ್ಯೆ. 27778-27816/2011ರಂತೆ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿರುತ್ತಾರೆ. ಆದರೆ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ದಿನಾಂಕ 25.08.2015ರ ಆದೇಶವು ಕರ್ನಾಟಕ ಸರ್ಕಾರದ ಪರವಾಗಿ ಬಂದಿರುತ್ತದೆ ಎಂದು ತಿಳಿಸಿದರು.<br><br>ದಿನಾಂಕ 07.10.2015ರಂದು ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅರ್ಚಕರ ಹಳ್ಳಿ, ರಾಮನಗರ ಜಿಲ್ಲೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ |

ಕುಲಸಚಿವರು

ಕುಲಪತಿಗಳು

| | |
|---|---|
| | ವಿಶ್ವವಿದ್ಯಾಲಯದ ಕ್ಯಾಂಪಸ್ ಮತ್ತು ಆರೋಗ್ಯ ನಗರ ಹೆಲ್ತ್ ಸಿಟಿ ನಿರ್ಮಾಣದ ಬಗ್ಗೆ ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದ್ದು ಇದರಂತೆ ಕೆಐಎಡಿಬಿ ವತಿಯಿಂದ 216 ಎಕರೆ 24 ಗುಂಟೆ ಜಮೀನನ್ನು ಸಂಬಂಧಪಟ್ಟ ಇಲಾಖೆಗಳಿಗೆ ಹಸ್ತಾಂತರಿಸಿ ತದನಂತರ ಪಿಡಬ್ಲೂಡಿ ಇಲಾಖೆಯು ಸದರಿ ಯೋಜನೆಯನ್ನು ತೆಗೆದುಕೊಳ್ಳಬೇಕು ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಆಡಳಿತ ಕಟ್ಟಡವನ್ನು ಪ್ರಥಮ ಹಂತದಲ್ಲಿ ಮತ್ತು ಹೆಲ್ತ್ ಸಿಟಿ ನಿರ್ಮಾಣವನ್ನು ಎರಡನೇ ಹಂತದಲ್ಲಿ ಮಾಡಬೇಕೆಂದು ತೀರ್ಮಾನಿಸಲಾಯಿತು.<br><br>ದಿನಾಂಕ 16.10.2015ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ವಿಶ್ವವಿದ್ಯಾಲಯದಲ್ಲಿ ಇರುವ ರೂ. 335 ಕೋಟಿಯನ್ನು ರಾಮನಗರ ಜಿಲ್ಲೆಯಲ್ಲಿ ವಿಶ್ವವಿದ್ಯಾಲಯದ ಆಡಳಿತ ಕಟ್ಟಡವನ್ನು ನಿರ್ಮಿಸಲು ಬಳಸುವಂತೆ ನಿರ್ಣಯಿಸಲಾಯಿತು.<br><br>ದಿನಾಂಕ 17.10.2015ರಂದು ನಡೆದ ವಿಶೇಷ ಸೆನೆಟ್ ಸಭೆಯಲ್ಲಿ ಏಕ ಮಾತ್ರ ಕಾರ್ಯಸೂಚಿ ನಿರ್ಣಯದಂತೆ ಕಟ್ಟಡವನ್ನು ರಾಮನಗರ ಜಿಲ್ಲೆಯಲ್ಲಿ ಹಸ್ತಾಂತರಗೊಂಡಿರುವ 71 ಎಕರೆ 15 ಗುಂಟೆ ಜಮೀನಿನಲ್ಲಿ ವಿಶ್ವವಿದ್ಯಾಲಯದ ಆಡಳಿತ ಕಟ್ಟಡವನ್ನು ನಿರ್ಮಿಸಲು ವಿಶ್ವವಿದ್ಯಾಲಯವು ಕ್ರಮಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು. ವಿಶ್ವವಿದ್ಯಾಲಯವು ಹೆಲ್ತ್ ಸಿಟಿ ಯೋಜನೆಯನ್ನು ಕರ್ನಾಟಕ ಸರ್ಕಾರದಿಂದ ನೀಡಿರುವ 145 ಎಕರೆ 9 ಗುಂಟೆ ಜಮೀನಿನಲ್ಲಿ ನಿರ್ಮಿಸಲು ವಿಶ್ವವಿದ್ಯಾಲಯದಲ್ಲಿ ಹಣದ ಕೊರತೆ ಇರುವುದರಿಂದ ಸದರಿ ಯೋಜನೆಯನ್ನು ತೆಗೆದುಕೊಳ್ಳಬಾರದೆಂದು ತೀರ್ಮಾನಿಸಲಾಯಿತು. ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣ ಕಾರ್ಯವನ್ನು ವಿಶ್ವವಿದ್ಯಾಲಯವೇ ಗ್ಲೋಬಲ್ ಟೆಂಡರ್ ಮುಖಾಂತರ ಪಾರದರ್ಶಕತೆ ನಿಯಮದಡಿಯಲ್ಲಿ ಮಾಡಬೇಕೆಂದು ನಿರ್ಣಯಿಸಲಾಯಿತು.<br><br>ದಿನಾಂಕ 21.03.2016ರಲ್ಲಿ ಹೆಚ್ ಎಸ್ ಸೋಮಶೇಖರ್ ಮತ್ತು ಇತರರು ದಾವೆ ಸಂಖ್ಯೆ. 588807-809/2015 ಹಾಗೂ ಶ್ರೀಮತಿ ಜಿ.ಹೆಚ್. ಪುಟ್ಟತಾಯಮ್ಮ ಮತ್ತು ಇತರರು ಇವರ ದಾವೆ ಸಂಖ್ಯೆ. 18066-18086 ಮತ್ತು 24399/2016 ಈ ದಾವೆಗಳು ಮಾನ್ಯ ಉಚ್ಚ ನ್ಯಾಯಾಲಯ, ಕರ್ನಾಟಕ ಇಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುತ್ತವೆ. ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ 28.04.2018ರ ಆದೇಶದಂತೆ ಸದರಿ ದಾವೆದಾರರನ್ನು ಸದರಿ ಜಮೀನಿನ ಸ್ವಾಧೀನವನ್ನು ಅಡ್ಡಿಪಡಿಸದಂತೆ ಆದೇಶವನ್ನು ನೀಡಿರುತ್ತದೆ. ಇದರಂತೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣಕ್ಕೆ ಮಂಜೂರು ಮಾಡಿರುವ ಜಮೀನು ವ್ಯಾಜ್ಯದಿಂದ ಕೂಡಿದ್ದು ಸದರಿ ಜಮೀನು ವ್ಯಾಜ್ಯವಿರದ ಜಮೀನಿನ ಮಧ್ಯೆ ಸೇರಿಕೊಂಡಿರುತ್ತದೆ.<br><br>ದಿನಾಂಕ 24.03.2016ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ಅರ್ಚಕರ ಹಳ್ಳಿ, ರಾಮನಗರ |

ಕುಲಸಚಿವರು

ಕುಲಪತಿಗಳು

| | |
|---|---|
| | ಜಿಲ್ಲೆಯಲ್ಲಿ ಕಟ್ಟಡ ನಿರ್ಮಾಣ ಮಾಡುವ ಕಾರ್ಯವನ್ನು ಮೆ\|\| ನಾಗಾರ್ಜುನ ಕನ್ಸ್ಟ್ರಕ್ಷನ್ ಲಿಮಿಟೆಡ್ ಇವರಿಗೆ ಪರಿಷ್ಕೃತ ಎಸ್ಆರ್ (2015-16)ರ ದರದಲ್ಲಿ ರೂ. 468.41 ಕೋಟಿ ಎಂದು ತಿಳಿಸಲಾಯಿತು. ಸದರಿ ಸಭೆಯಲ್ಲಿ ಉಳಿಕೆ ಕಟ್ಟಡ ಕಾಮಗಾರಿಗೆ ರೂ. 111.59 ಕೋಟಿಯ ಕಾಮಗಾರಿಗೆ ಪಿಡಬ್ಲ್ಯೂಡಿ ಇಲಾಖೆಯವರು ಟೆಂಡರ್ ಕರೆಯಬೇಕೆಂದು ನಿರ್ಣಯಿಸಲಾಯಿತು.<br><br>ಡಾ. ಚಂದ್ರಶೇಖರ್ ಮತ್ತು ಇತರರು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ. 25603-607/2016ರಲ್ಲಿ ದಿನಾಂಕ 24.03.2016ರಂದು ಹೊರಡಿಸಿರುವ ಕರ್ನಾಟಕ ಸರ್ಕಾರದ ನಡವಳಿಯನ್ನು ರದ್ದುಗೊಳಿಸಲು ಮತ್ತು ಪಿಡಬ್ಲ್ಯೂಡಿಯಿಂದ ನೀಡಿರುವ ಕಾರ್ಯಾದೇಶ 16/2007-08 ದಿನಾಂಕ 25.06.2007 ಇದಕ್ಕೆ ಪ್ರತಿಬಂಧಕಾಜ್ಞೆ ನೀಡಲು ಕೋರಿ ನ್ಯಾಯಾಲಯಕ್ಕೆ ದಾವೆ ಸಲ್ಲಿಸಿರುತ್ತಾರೆ. ಗೌರವಾನ್ವಿತ ಉಚ್ಚ ನ್ಯಾಯಾಲಯವು ದಿನಾಂಕ 16.08.2016ರ ಮಧ್ಯಂತರ ಆದೇಶದಂತೆ ಪ್ರತಿಪಕ್ಷದಾರರು ಸದರಿ ವಿಷಯವನ್ನು ಅವಕ್ಷೇಪ (the matter shall not be precipated) ಮಾಡಬಾರದೆಂದು ಆದೇಶ ನೀಡಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ. ಹೆಚ್ಎಫ್ಡಬ್ಲ್ಯೂ 425 ಆರ್ಜಿಯು 2015 ಬೆಂಗಳೂರು ದಿನಾಂಕ 17.05.2016ರಲ್ಲಿ ಸೂಚಿಸಿರುವಂತೆ ವಿಶ್ವವಿದ್ಯಾಲಯದ ಆಡಳಿತ ಕಟ್ಟಡ, ವೈದ್ಯಕೀಯ, ದಂತ ವೈದ್ಯಕೀಯ, ನರ್ಸಿಂಗ್ ಮತ್ತು ಫಾರ್ಮಸಿ ಕಾಲೇಜುಗಳು ಹಾಗೂ 250 ಹಾಸಿಗೆ ಹೈಟೆಕ್ ಆಸ್ಪತ್ರೆ ಮತ್ತು 750 ಹಾಸಿಗೆಯ ಆಸ್ಪತ್ರೆ ಇವುಗಳ ಕಾಮಗಾರಿಯನ್ನು ವಿಶ್ವವಿದ್ಯಾಲಯದ ಹಣದಿಂದ ನಿರ್ಮಿಸಬೇಕೆಂದು ಆದೇಶಿಸಲಾಗಿದೆ. ಸದರಿ ಸರ್ಕಾರದ ಆದೇಶದಂತೆ "ಸದರಿ ಕಾಮಗಾರಿಯ ಬಿಲ್ಲುಗಳ ಮೊತ್ತವನ್ನು ಸರ್ಕಾರವು ಕಾಲಕಾಲಕ್ಕೆ ಅನುದಾನ ಬಿಡುಗಡೆಗೆ ಹೊರಡಿಸುವ ಆದೇಶಗಳನುಸಾರ ವಿಶ್ವವಿದ್ಯಾಲಯದ ಕುಲಸಚಿವರು, ಕಾರ್ಯಪಾಲಕರ ಅಭಿಯಂತರರು, ಲೋಕೋಪಯೋಗಿ ಇಲಾಖೆ, ರಾಮನಗರ ವಿಭಾಗ, ರಾಮನಗರ ಇವರಿಗೆ ನೇರವಾಗಿ ಕ್ರಾಸ್ಡ್ ಚೆಕ್ ಮುಖಾಂತರ ಪಾವತಿಸತಕ್ಕದ್ದು. ಶಾಸನಬದ್ಧ ಕಳಿಕೆಗಳಾದ ಕೆ.ಎಸ್.ಟಿ, ಸಿ.ಎಸ್.ಟಿ ಹಾಗೂ ಇತ್ಯಾದಿ ಕಳಿಕೆಗಳನ್ನು ಸಂಬಂಧಿತ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ರಾಮನಗರ ವಿಭಾಗ, ರಾಮನಗರ ಇವರು ಪಾವತಿಸತಕ್ಕದ್ದು".<br><br>ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮತ್ತೊಮ್ಮೆ ವಿಚಾರಣೆ ಮುಂದುವರೆದು ಮಧ್ಯಂತರ ಆದೇಶವನ್ನು ತಿದ್ದುಪಡಿ ಮಾಡಿ ದಿನಾಂಕ 07.06.2017ರಂದು ಕಟ್ಟಡ ನಿರ್ಮಾಣ ಸಂಸ್ಥೆಯು ವಿಶ್ವವಿದ್ಯಾಲಯದ ಆಡಳಿತ ಕಟ್ಟಡದ ನಿರ್ಮಾಣದ ಕಾರ್ಯವನ್ನು ಮಾತ್ರ ತೆಗೆದುಕೊಳ್ಳುವಂತೆ ಆದೇಶ ಹೊರಡಿಸಲಾಯಿತು.<br><br>ದಿನಾಂಕ 17.08.2016ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತುತ ವಿಶ್ವವಿದ್ಯಾಲಯದ ಕ್ಯಾಂಪಸ್ ಮತ್ತು ಇತರೆ ಕಟ್ಟಡಗಳನ್ನು ನಿರ್ಮಾಣ ಮಾಡುವ ಜಮೀನಿನಲ್ಲಿ ಅನೇಕ ವ್ಯಾಜ್ಯಪೂರಿತ ಜಮೀನುಗಳು |

ಕುಲಸಚಿವರು ಕುಲಪತಿಗಳು

| | |
|---|---|
| | ಕೂಡಿಕೊಂಡಂತೆ ಇದ್ದು ಒಟ್ಟಾರೆ 71 ಎಕರೆ ಜಮೀನಿನ ಪೈಕಿ 16 ಎಕರೆ ವ್ಯಾಜ್ಯಪೂರಿತವಾಗಿರುತ್ತದೆ. ಸದರಿ ಜಮೀನಿಗೆ ಸೂಕ್ತ ರಸ್ತೆ ವ್ಯವಸ್ಥೆ ಇಲ್ಲದ ಕಾರಣ ಸದರಿ ಜಮೀನಿನಲ್ಲಿ ಅಭಿಯಂತರರು ನೀಡಿರುವ ನಕ್ಷೆಯಂತೆ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣ ಮಾಡುವುದು ವಾಸ್ತವದಲ್ಲಿ ಅಸಾಧ್ಯ ಎಂದು ತಿಳಿಸಲಾಯಿತು. ಸದರಿ ಸಭೆಯಲ್ಲಿ 2006ರಲ್ಲಿ ನೀಡಿರುವ ನಕ್ಷೆಯನ್ನು ಪ್ರಸ್ತುತ ಕಾಲಕ್ಕೆ ಮಾರ್ಪಾಡು ಮಾಡಲು ಸೂಚಿಸಲಾಯಿತು.<br><br>ದಿನಾಂಕ 18.08.2016ರಂದು ನಡೆದ ವಿಶೇಷ ಸೆನೆಟ್ ಸಭೆಯಲ್ಲಿ ರಾಮನಗರ ಜಿಲ್ಲೆಯಲ್ಲಿ ನಿರ್ಮಾಣ ಮಾಡಲು ನಿರ್ಧರಿಸಿರುವ ವಿಶ್ವವಿದ್ಯಾಲಯದ ಕ್ಯಾಂಪಸ್ ಬಗ್ಗೆ ಎಲ್ಲಾ ದಾಖಲೆಗಳನ್ನು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರುಗಳಿಗೆ ಕಳುಹಿಸಬೇಕೆಂದು ಮತ್ತು ಈ ಸಂಬಂಧ ವಿಶೇಷ ಸೆನೆಟ್ ಸಭೆಯನ್ನು ಕರೆಯಬೇಕೆಂದು ಸೂಚಿಸಲಾಯಿತು. ಇದರಂತೆ ದಿನಾಂಕ 07.12.2016ರಂದು ವಿಶೇಷ ಸೆನೆಟ್ ಸಭೆಯನ್ನು ಆಯೋಜಿಸಿ ಸದರಿ ಸಭೆಯಲ್ಲಿ ಸದರಿ ವಿಷಯದ ಸಂಬಂಧ ವಿಶೇಷ ಸಭೆಯನ್ನು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ವೈದ್ಯಕೀಯ ಶಿಕ್ಷಣ ಸಚಿವರು, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಮತ್ತು ಎಲ್ಲಾ ಸೆನೆಟ್ ಹಾಗೂ ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಸಭೆಯನ್ನು ಕರೆಯಬೇಕೆಂದು ತೀರ್ಮಾನಿಸಲಾಯಿತು.<br><br>ದಿನಾಂಕ 12.07.2017ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣದ ಕುರಿತು ಸಭೆಯನ್ನು ಕರೆಯಲಾಯಿತು. ಸದರಿ ಸಭೆಯ ನಿರ್ಣಯದಂತೆ ಒಟ್ಟು ಹಣದಲ್ಲಿ 1/3 ಭಾಗದ ಹಣವನ್ನು ತ್ವರಿತವಾಗಿ ಪಿಡಬ್ಲೂಡಿ ಇಲಾಖೆಗೆ ವರ್ಗಾಯಿಸಬೇಕೆಂದು ತೀರ್ಮಾನಿಸಲಾಯಿತು ಹಾಗೂ ಮುಖ್ಯ ವಾಸ್ತು ಶಿಲ್ಪಿಗಾರರು ನೀಡಿದ ವಿನ್ಯಾಸಕ್ಕೆ ಅನುಮೋದನೆಯನ್ನು ನೀಡಲಾಯಿತು.<br><br>ಸರ್ಕಾರದ ಆದೇಶ ಪತ್ರ ಸಂಖ್ಯೆ. ಹೆಚ್‌ಎಫ್‌ಡಬ್ಲೂ 20 ಆರ್‌ಜಿಯು 2017 ದಿನಾಂಕ 31.07.2017ರ ಆದೇಶದಂತೆ ವಿಶ್ವವಿದ್ಯಾಲಯದ ವತಿಯಿಂದ ರೂ. 193 ಕೋಟಿಗಳನ್ನು ಪಿಡಬ್ಲೂಡಿ ಇಲಾಖೆಗೆ ಮತ್ತು ಉಳಿಕೆ ಮೊತ್ತ ರೂ. 387 ಕೋಟಿಗಳನ್ನು ಎಸ್ಕ್ರೋ ಖಾತೆಗೆ ಜಮಾ ಮಾಡಲು ಆದೇಶಿಸಲಾಯಿತು.<br><br>ದಿನಾಂಕ 26 ಮತ್ತು 27ನೇ ಸೆಪ್ಟೆಂಬರ್ 2017ರ ಆರ್ಥಿಕ ಸಮಿತಿ ಸಭೆಯ ನಿರ್ಣಯದಂತೆ ಸದರಿ ವಿಷಯವನ್ನು ಸಿಂಡಿಕೇಟ್ ಮತ್ತು ಸೆನೆಟ್ ಸಭೆಯಲ್ಲಿ ಮಂಡಿಸಿ ಸದರಿ ಸಭೆಯ ನಿರ್ಣಯದಂತೆ ಕ್ರಮವಹಿಸಲು ತೀರ್ಮಾನಿಸಲಾಯಿತು.<br><br>ದಿನಾಂಕ 27.09.2017ರಂದು ಗೌರವಾನ್ವಿತ ಕುಲಾಧಿಪತಿಗಳು ವಿಶ್ವವಿದ್ಯಾಲಯದ ಕುಲಪತಿಗಳೊಂದಿಗೆ ಅವರ ಕಛೇರಿಯಲ್ಲಿ ಚರ್ಚಿಸಿ ವಿಶ್ವವಿದ್ಯಾಲಯದ ಕಾರ್ಯಕಲಾಪಗಳ ಬಗ್ಗೆ ಮತ್ತು ಹಣ ವರ್ಗಾವಣೆ ಮಾಡುವ ಬಗ್ಗೆ ಗೌರವಾನ್ವಿತ ಕುಲಪತಿಗಳಲ್ಲಿ ವಿವರಣೆ ನೀಡಲು ತಿಳಿಸಿರುತ್ತಾರೆ. ಇದರಂತೆ ಗೌರವಾನ್ವಿತ ಕುಲಪತಿಗಳು ದಿನಾಂಕ |

ಕುಲಸಚಿವರು ಕುಲಪತಿಗಳು

| | |
|---|---|
| | 27.09.2017ರಂದು ಗೌರವಾನ್ವಿತ ಕುಲಾಧಿಪತಿಗಳಿಗೆ ವಿವರಣೆಯನ್ನು ಸಲ್ಲಿಸಿರುತ್ತಾರೆ.<br><br>ದಿನಾಂಕ 27.09.2017ರಂದು ಗೌರವಾನ್ವಿತ ಕುಲಾಧಿಪತಿಗಳ ಅಧೀನ ಕಾರ್ಯದರ್ಶಿಗಳು ಗೌರವಾನ್ವಿತ ಕುಲಪತಿಗಳಿಗೆ ಪತ್ರ ಸಂಖ್ಯೆ. ಜಿಎಸ್5/ ಕೆಹೆಚ್‌ಎಮ್/2017 ದಿನಾಂಕ 28.09.2017ರಂತೆ ಈ ಕೆಳಕಂಡಂತೆ<br><br>"Pending consideration of the clarification on the issue, let University/Vice-Chancellor maintain Status-quo".<br><br>ಎಂದು ಆದೇಶಿಸಿರುತ್ತಾರೆ.<br><br>ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಡಾ. ರಾಮಕೃಷ್ಣ ಮತ್ತು ಇತರೆ 57 ಪೀರ್ಯಾದುದಾರರು ಹೂಡಿರುವ ದಾವೆ ಸಂಖ್ಯೆ. 11154/2017 ದಿನಾಂಕ 14.03.2018ರ ಮಧ್ಯಂತರ ಆದೇಶದಂತೆ ವಿಶ್ವವಿದ್ಯಾಲಯದ ಕೇಂದ್ರ ಸ್ಥಾನ ಬದಲಾವಣೆಗೆ ಪ್ರತಿಬಂಧಕಾಜ್ಞೆ ಆದೇಶ ಹೊರಡಿಸಿರುತ್ತದೆ.<br><br>ಸಚಿವ ಸಂಪುಟದ ಸಭೆ ದಿನಾಂಕ 25.02.2019ರ ನಿರ್ಣಯದಂತೆ ಸರ್ಕಾರದ ಆದೇಶ ಪತ್ರ ಸಂಖ್ಯೆ ಆಕುಕ 15 ಆರ್ ಜಿಯು 2019 ಬೆಂಗಳೂರು ದಿನಾಂಕ 28.02.2019ರಂತೆ ಈ ಕೆಳಕಂಡ ಆದೇಶಗಳನ್ನು ಹೊರಡಿಸಿರುತ್ತದೆ.<br><br>1) The RGUHS Campus and allied building construction to be taken up by Public Works Department.<br>2) To invite short term tender after litigation free land has been handed over to Public Works Department.<br>3)The University Administrative block plan and Design has to be counter signed by the University Authorities.<br>4)The cost of the University Administrative block construction has to be bourned by the University and remaning cost of the allied buildings has to be bourned by the Government.<br>5) To implement the project, the RGUHS and Health and Family Welfare department (Medical Education) shall depost 33% of the sanctioned amount to be deposited to PWD.<br><br>ದಿನಾಂಕ 10.05.2019ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಈ ಕೆಳಕಂಡ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.<br><br>Syndicate appreciated and approved the proceedings of the meeting held under the chairmanship of Hon'ble Chief Minister of Karnataka for construction of administrative block at Archakarahalli, Ramanagara. |

ಕುಲಸಚಿವರು

ಕುಲಪತಿಗಳು

Syndicate also gave approval for payment of around Rs. 40 crores towards differential compensation to be paid to the land owners.

Syndicate also felt that a request to be made in view of the governments above decision for withdrawal of court cases filed by Hon'ble Syndicate /Senate members.

Members also agreed to the release of 33% of the estimated cost only after obtaining all the approvals from the competent authorities. The Syndicate also decided that Hon'ble Governor of Karnataka be appraised of the matter of vacation of stay and transfer of land to RGUHS and seek permission to release funds for construction of administrative building at Archakarahalli, Ramanagara.

ದಿನಾಂಕ 29.06.2019ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಿಸಲಾಯಿತು

The Syndicate reaffirmed its stand to construct administrative block at Archakarahalli village, Ramanagar Taluk and District after obtaining litigation free land. Further, the Syndicate gave approval for estimated amount of Rs. 60.00 crores.

ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಹೂಡಿರುವ ದಾವೆ ಸಂಖ್ಯೆ. ಎಸ್ ಎಲ್ ಪಿ (ಸಿ) ನಂ. 000961/2022 ದಾವೆಯು ಇನ್ನೂ ಇತ್ಯರ್ಥಕ್ಕಾಗಿ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

ಗೌರವಾನ್ವಿತ ಕುಲಪತಿಗಳು ಸಭೆಯಲ್ಲಿ ನಿವೃತ್ತ ಕುಲಪತಿಗಳಾದ ಡಾ. ಆರ್ ಚಂದ್ರಶೇಖರ್ ಮತ್ತು ಇತರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ 2002/2023 ದಿನಾಂಕ 07.02.2023ರಂದು ಹಣ ವರ್ಗಾವಣೆ ಮಾಡುವುದನ್ನು ಪ್ರಶ್ನಿಸಿ ದಾವೆ ಸಲ್ಲಿಸಿರುವುದನ್ನು ಮತ್ತು ಡಾ. ಆನಂದ್ ಕಿರಿಶಾಲ್, ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ. 3027/2023 ದಿನಾಂಕ 06.02.2023ರಂದು ಇದೇ ವಿಷಯದಲ್ಲಿ ದಾವೆ ಹೂಡಿದ್ದು, ಈ ವಿಷಯವನ್ನು ಸಭೆಗೆ ತಿಳಿಸಿ ಸದರಿ ದಾವೆಗಳು ಇತ್ಯರ್ಥಕ್ಕೆ ಬಾಕಿ ಇರುವುದರಿಂದ ಹಣದ ವರ್ಗಾವಣೆ ಮಾಡುವುದು ವಿಚಾರಣಾಧೀನ (Sub-judice) ಆಗಬಹುದೇ ಎಂಬುದನ್ನು ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲು ತಿಳಿಸಿದರು.

ಗೌರವಾನ್ವಿತ ಕುಲಪತಿಗಳು ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಕೋರಿದರು.

ಡಾ. ಹೆಚ್. ಜೆ ಜೈಕೃಷ್ಣ, ಸಿಂಡಿಕೇಟ್ ಸದಸ್ಯರು ರಾಮನಗರ ಜಿಲ್ಲೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ರಚಿತವಾದ

ಕುಲಸಚಿವರು

ಕುಲಪತಿಗಳು

| | |
|---|---|
| | ಬಗ್ಗೆ ಮತ್ತು ರಾಮನಗರ ಜಿಲ್ಲೆಯಲ್ಲಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ನಿರ್ಮಿಸಲು ಸರ್ಕಾರದಿಂದ ಭೂಮಿಯನ್ನು ಪಡೆದುಕೊಂಡ ಬಗ್ಗೆ ವಿವರಿಸಿದರು. 1994ರಲ್ಲಿ ಸರ್ಕಾರವು ಎಲ್ಲಾ ಆರೋಗ್ಯ ವಿಜ್ಞಾನಗಳ ನಿಖಾಯಗಳನ್ನು ಒಂದೇ ಸೂರಿನ ಅಡಿ ತರುವ ಉದ್ದೇಶದಿಂದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು ಎಂದು ತಿಳಿಸಿದರು. 1996ರಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ತೀರ್ಮಾನಿಸಿದ ಸಂದರ್ಭದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಸರ್ಕಾರವನ್ನು ಜಮೀನು ಮಂಜೂರು ಮಾಡಲು ಕೋರಿಕೆ ಸಲ್ಲಿಸಿದ ಸಂದರ್ಭದಲ್ಲಿ ಸರ್ಕಾರವು ಕಡಿಮೆ ದರದಲ್ಲಿ ಮಂಜೂರು ಮಾಡಿಕೊಟ್ಟಿರುತ್ತದೆ.<br><br>1996ರಿಂದ ಇಲ್ಲಿಯವರೆಗೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಹೊಂದಿರುವ ಕಟ್ಟಡವು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಕಟ್ಟಡವಾಗಿದ್ದು ಸುಮಾರು 1 ಎಕರೆ 1 ಗುಂಟೆ ಜಮೀನಿನಲ್ಲಿರುವ 60,000 ಚದರ ಅಡಿ ಕಟ್ಟಡವನ್ನು ಕರ್ನಾಟಕ ಸರ್ಕಾರವು ಬಾಡಿಗೆರಹಿತವಾಗಿ ಉಚಿತವಾಗಿ ವಿಶ್ವವಿದ್ಯಾಲಯಕ್ಕೆ ನೀಡಿರುತ್ತದೆ.<br><br>ಭೀಮನಕುಪ್ಪೆಯಲ್ಲಿ ಸರ್ಕಾರ ಮಂಜೂರು ಮಾಡಿರುವ 55 ಎಕರೆ ಜಮೀನು ಇಂದಿನ ಮಾರುಕಟ್ಟೆ ದರದಲ್ಲಿ ರೂ. 750ರಿಂದ 1000 ಕೋಟಿಗಳು ಬೆಲೆ ಬಾಳುತ್ತದೆ ಎಂದು ತಿಳಿಸಿದರು.<br><br>ಸೆಕ್ಷನ್ 40 ಅಡಿಯಲ್ಲಿ, "40. ನಿಧಿಗಳ ನಿರ್ವಹಣೆ – ವಿಶ್ವವಿದ್ಯಾಲಯದ ಎಲ್ಲಾ ನಿಧಿಗಳನ್ನು ಶಾಸನಗಳ ಮೂಲಕ ನಿಯಮಿಸಬಹುದಾದಂಥ ರೀತಿಯಲ್ಲಿ ನಿರ್ವಹಿಸತಕ್ಕದ್ದು: ಪರಂತು, ರಾಜ್ಯ ಸರ್ಕಾರವು ನಿಧಿಗಳ ನಿರ್ವಹಣೆಗೆ ಮತ್ತು ಬಳಕೆಗೆ ಸಂಬಂಧಿಸಿದಂತೆ, ಕಾಲಕಾಲಕ್ಕೆ ನಿರ್ದೇಶನಗಳನ್ನು ಹೊರಡಿಸಬಹುದು ರಾಜ್ಯ ಸರ್ಕಾರದ ನಿರ್ದೇಶನಗಳು ಅಂತಿಮವಾಗಿರತಕ್ಕದ್ದು" ಎಂದು ಸಭೆಯಲ್ಲಿ ಮಂಡಿಸಿದರು.<br><br>ವಿಶ್ವವಿದ್ಯಾಲಯಕ್ಕೆ ಆಸ್ತಿ ಸಂಗ್ರಹವಾಗುತ್ತದೆ. ಹಣ ಬಿಡುಗಡೆ ಮಾಡಿದ ನಂತರ ಅಲ್ಲಿನ ಕೆಲಸ ಕಾರ್ಯಗಳ ಪರಿಶೀಲನೆಗಾಗಿ ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಮಾನಿಟರಿಂಗ್ ಸಮಿತಿಯನ್ನು ಕೆಲವು ಷರತ್ತುಗಳನ್ನು ವಿಧಿಸಿ ರಚಿಸಬಹುದು ಎಂದು ಸಭೆಯಲ್ಲಿ ತಿಳಿಸಿದರು. ಈ ಎಲ್ಲದರ ಹಿನ್ನಲೆಯಲ್ಲಿ ಸರ್ಕಾರದ ಕೆಹೆಚ್‌ಆರ್‌ಡಿಪಿಗೆ ವಿಶ್ವವಿದ್ಯಾಲಯದ ಖಾತೆಯಿಂದ ಹಣವನ್ನು ಬಿಡುಗಡೆ ಮಾಡಲೇಬೇಕೆಂದು ಒತ್ತಾಯಿಸಿದರು. ವಿಶ್ವವಿದ್ಯಾಲಯದ ಕ್ಯಾಂಪಸ್ ಕಟ್ಟುವ ಯೋಜನೆಯ ಒಟ್ಟು ಮೊತ್ತ ರೂ. 600 ಕೋಟಿಗಳಲ್ಲಿ ಶೇ 50ರಷ್ಟು ಹಣವನ್ನು ತಕ್ಷಣವೇ ಬಿಡುಗಡೆ ಮಾಡುವಂತೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಹಾಗೂ ಸದರಿ ಕ್ಯಾಂಪಸ್ ನಿರ್ಮಾಣದ ಶಂಕುಸ್ಥಾಪನೆ ಕಾರ್ಯಕ್ಕೆ ಮಾನ್ಯ ಪ್ರಧಾನ ಮಂತ್ರಿಗಳನ್ನು ಕರೆಸಬಹುದೆಂದು ತಿಳಿಸಿದರು. |

ಕುಲಸಚಿವರು ಕುಲಪತಿಗಳು

| | |
|---|---|
| | ಡಾ. ವೆಂಕಟಗಿರಿ, ಸಿಂಡಿಕೇಟ್ ಸದಸ್ಯರು ನಾವು ಕಳೆದ 27 ವರ್ಷಗಳಿಂದ ಕಟ್ಟಡ ಕಟ್ಟದೆ ಇರುವುದೆಂದರೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸ್ವಂತ ಕಟ್ಟಡದ ಅವಶ್ಯಕತೆಯಿರುತ್ತದೆ. ಸರ್ಕಾರದ ಸೂಚನೆಯಂತೆ ಹಂತಹಂತವಾಗಿ ಅಥವಾ ಒಂದೇ ಕಂತಿನಲ್ಲಿ ಹಣ ಬಿಡುಗಡೆ ಮಾಡಬಹುದು ಎಂದು ತಿಳಿಸಿದರು.<br><br>ಡಾ. ಆನಂದ್ ಕಿರಿಶಾಲ್, ಸಿಂಡಿಕೇಟ್ ಸದಸ್ಯರು ಇವರು ಸರ್ಕಾರಕ್ಕೆ ವಿಶ್ವವಿದ್ಯಾಲಯದ ಖಾತೆಯಿಂದ ಹಣ ಬಿಡುಗಡೆ ಮಾಡುವ ಬಗ್ಗೆ ಆಕ್ಷೇಪವನ್ನು ವ್ಯಕ್ತಪಡಿಸಿ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ. ಪಿಐಎಲ್-2002/2023 ಮತ್ತು ದಾವೆ ಸಂಖ್ಯೆ. 3027/2023 ಇವುಗಳು ಇತ್ಯರ್ಥಕ್ಕಾಗಿ ಬಾಕಿ ಇರುವುದರಿಂದ ಹಣ ಬಿಡುಗಡೆಯ ಬಗ್ಗೆ ಯಾವುದೇ ನಿರ್ಧಾರವು ವಿಚಾರಣಾಧೀನ (Sub-judice) ಆಗುವುದರಿಂದ ವಿಶ್ವವಿದ್ಯಾಲಯದ ಹಣ ಬಿಡುಗಡೆ ಮಾಡುವ ನಿರ್ಧಾರವನ್ನು ಮುಂದುವರೆಸಬಾರದೆಂದು ಸಭೆಯಲ್ಲಿ ತಿಳಿಸಿದರು.<br><br>ಮುಂದುವರೆದು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಮಂಜೂರಾಗಿರುವ 71 ಎಕರೆ 15 ಗುಂಟೆ ಜಮೀನಿನ ಪೈಕಿ ಕೇವಲ 41 ಎಕರೆ 11 ಗುಂಟೆ ಜಮೀನನ್ನು ಮಾತ್ರ ಹಸ್ತಾಂತರ ಮಾಡಿದ್ದು ಉಳಿಕೆ ಜಮೀನು ನ್ಯಾಯಾಲಯದಲ್ಲಿ ವ್ಯಾಜ್ಯದಲ್ಲಿದ್ದು ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ. ಇದೂ ಅಲ್ಲದೆ ಕಟ್ಟಡದ ವಿನ್ಯಾಸ, ಭೌಗೋಳಿಕ ಮಾಪನ ಕಾರ್ಯದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ಸಭೆಗೆ ತಿಳಿಸಿದರು. ಅರ್ಚಕರಹಳ್ಳಿ, ರಾಮನಗರ ಜಿಲ್ಲೆ ಇಲ್ಲಿ ವೈದ್ಯಕೀಯ ಕಾಲೇಜನ್ನು ನಿರ್ಮಿಸಲು ತೀರ್ಮಾನಿಸಿರುವ ಸದರಿ ಜಮೀನು ಯಾವುದು ಎಂದಾಗಲಿ ಅಥವಾ ಸದರಿ ಜಮೀನು ವಿಶ್ವವಿದ್ಯಾಲಯದ ಹೆಸರಿನಲ್ಲಾಗಲಿ ಇಲ್ಲದೆ ಇರುವ ಕಾರಣ ಹಣ ಬಿಡುಗಡೆ ಮಾಡುವುದು ಸೂಕ್ತವಲ್ಲವೆಂದು ಸಭೆಯಲ್ಲಿ ಮಂಡಿಸಿದರು. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಲ್ಲಿನ ದಾವೆ State of Punjab Vs Sendari Val (2003) ಇದರ ಆದೇಶದಂತೆ ಸ್ವಾಯತ್ತ ಸಂಸ್ಥೆಯು ರಾಜ್ಯ ಸರ್ಕಾರಕ್ಕೆ ಹಣ ವರ್ಗಾವಣೆ ಮಾಡುವ ಅವಶ್ಯಕತೆ ಇಲ್ಲವೆಂದು ಆದೇಶಿಸಿರುತ್ತದೆ ಎಂದು ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಗಮನ ಸೆಳೆದರು.<br><br>ಡಾ. ಆನಂದ್ ಕಿರಿಶಾಲ್, ಸಿಂಡಿಕೇಟ್ ಸದಸ್ಯರು ಇವರು ಸದರಿ ವಿಷಯದ ತೀರ್ಮಾನವು ಹಣ ಬಿಡುಗಡೆ ಹಾಗೂ ಟೆಂಡರ್ ಪ್ರಕ್ರಿಯೆಗಳು ಕೆಟಿಟಿಪಿ ಆಕ್ಟ್ 2 (ಎಎ) ಮತ್ತು 2ಡಿ ಮತ್ತು ಸೆಕ್ಷನ್ 9ರ ವಿರುದ್ಧವಾಗಿದೆ ಈ ಸಂಬಂಧ ಒಂದು ಸಮಿತಿ ರಚಿಸಿ ಸವಿಸ್ತಾರವಾಗಿ ಪರಿಶೀಲಿಸಿ ನಂತರ ಯಾವುದೇ ಕಾನೂನಿಗೆ ವಿರುದ್ಧವಾಗಿರದ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಸಭೆಯಲ್ಲಿ ಕೋರಿದರು.<br><br>ಡಾ. ಪಾಂಡು, ಸಿಂಡಿಕೇಟ್ ಸದಸ್ಯರು ಬಿ.ಎಂ.ಸಿ ಮೆಡಿಕಲ್ ಕಾಲೇಜನ್ನು ನಡೆಸಲು ತಿಂಗಳಿಗೆ ರೂ. 14 ಕೋಟಿ ಖರ್ಚು ಬರುತ್ತಿರುವ ಬಗ್ಗೆ ಉದಾಹರಿಸಿ ಸರ್ಕಾರವು ತೀರ್ಮಾನಿಸಿರುವ ವಿಶ್ವವಿದ್ಯಾಲಯದ ವೈದ್ಯಕೀಯ ಕಾಲೇಜು |

ಕುಲಸಚಿವರು

ಕುಲಪತಿಗಳು

| | |
|---|---|
| | ನಿರ್ವಹಿಸಲು ತಗಲುವ ವೆಚ್ಚವನ್ನು ಹೇಗೆ ಭರಿಸಬಹುದು ಎಂದು ಯೋಚಿಸುವುದು ಸೂಕ್ತ ಎಂದು ಸಭೆಗೆ ತಿಳಿಸಿದರು.<br><br>ಡಾ. ರವಿಕುಮಾರ್. ಎಮ್. ಆರ್, ಸಿಂಡಿಕೇಟ್ ಸದಸ್ಯರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು 1994ರಲ್ಲಿ ಸರ್ಕಾರದಿಂದ ರಚಿತಗೊಂಡಿರುತ್ತದೆ. ಸದರಿ ಜಮೀನನ್ನು ನೀಡಿರುವುದು ಸಹ ಕರ್ನಾಟಕ ಸರ್ಕಾರವೇ ಆಗಿರುತ್ತದೆ. ಈಗಾಗಲೇ ಅನೇಕ ವಿಶ್ವವಿದ್ಯಾಲಯಗಳಾದ ಹಂಪಿ ವಿಶ್ವವಿದ್ಯಾಲಯ, ಗುಲ್ಬರ್ಗಾ ವಿಶ್ವವಿದ್ಯಾಲಯ, ಧಾರವಾಡ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ ಹೀಗೆ ಅನೇಕ ವಿಶ್ವವಿದ್ಯಾಲಯಗಳು ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ರಚಿತಗೊಂಡು ತಮ್ಮದೇ ಆದ ಕ್ಯಾಂಪಸ್‌ನ್ನು ಹೊಂದಿರುತ್ತದೆ. ಇದರಂತೆ ಆರೋಗ್ಯ ವಿಜ್ಞಾನಗಳಿಗೆ ಸಂಬಂಧಿಸಿದಂತೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ರಚಿತಗೊಳ್ಳಬೇಕೆಂದು ಸಭೆಗೆ ತಿಳಿಸಿದರು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಒಂದು ಸ್ವಾಯತ್ತ ಸಂಸ್ಥೆಯಾದರೂ ಸಹ ಇಲ್ಲಿ ಸರ್ಕಾರದ ನಿಯಮಗಳ ಉಲ್ಲಂಘನೆ ಆಗದೆ ನಡೆಯಬೇಕೆಂದು ತಿಳಿಸಿದರು. ವಿಶ್ವವಿದ್ಯಾಲಯಕ್ಕೆ ಕರ್ತವ್ಯ ನಿರ್ವಹಿಸಲು ಬರುವಂತಹ ಅಧಿಕಾರಿಗಳನ್ನು ಸರ್ಕಾರ ನೇಮಕ/ನಿಯೋಜನೆ ಮಾಡುತ್ತದೆ. ವಿಶ್ವವಿದ್ಯಾಲಯವು ನಷ್ಟವನ್ನು ಅನುಭವಿಸಿದ ಸಂದರ್ಭದಲ್ಲಿ ಸರ್ಕಾರವೇ ಸಹಾಯ ಮಾಡುತ್ತದೆ. ಈ ಎಲ್ಲದರ ಹಿನ್ನಲೆಯಲ್ಲಿ ಈಗಾಗಲೇ ವ್ಯಾಜ್ಯಮುಕ್ತವಾಗಿರುವ ಜಮೀನಿನಲ್ಲಿ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣ ಮಾಡಲು ವಿಶ್ವವಿದ್ಯಾಲಯದಿಂದ ಹಣ ಬಿಡುಗಡೆ ಮಾಡಬೇಕೆಂದು ಕೋರಿದರು.<br><br>ಡಾ. ರವಿಕುಮಾರ್. ಬಿ.ಎನ್, ಸಿಂಡಿಕೇಟ್ ಸದಸ್ಯರು ಇವರು ಈವರೆಗೂ ವಿಶ್ವವಿದ್ಯಾಲಯದ ಶಾಸನ ಹಾಗೂ ಅಧಿನಿಯಮದ ಪ್ರಕಾರ ಹಣಕಾಸು ಅಧಿನಿಯಮ ರಚಿತಗೊಂಡಿರುವುದಿಲ್ಲ ಮತ್ತು ರೂ. 10 ಕೋಟಿಗೂ ಮೀರಿದ ಟೆಂಡರ್ ಕರೆಯಲು ಸರ್ಕಾರದ ಅನುಮೋದನೆ ಪಡೆಯಬೇಕೆಂದು ತಿಳಿಸಿದರು. ಇಂತಹ ಸಂದರ್ಭದಲ್ಲಿ ಈಗಾಗಲೇ ಸರ್ಕಾರದ ಅಭಿಯಂತರರು, ಕೆಹೆಚ್‌ಇಆರ್‌ಡಿಪಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರಿಗೆ ಟೆಂಡರ್ ಕರೆದು ಕಟ್ಟಡ ಕಾಮಗಾರಿಯನ್ನು ನಿರ್ವಹಿಸಲು ಸರ್ಕಾರವು ಸೂಚಿಸಿರುವುದರಿಂದ ಹಣ ಬಿಡುಗಡೆ ಮಾಡಬೇಕೆಂದು ತಿಳಿಸಿದರು.<br><br>ಡಾ. ಕ್ರಾಂತಿ ಕಿರಣ್‌ರವರು ಮಾತನಾಡಿ, ನಮ್ಮ ರಾಜ್ಯದಲ್ಲಿ ಅಂತರರಾಷ್ಟ್ರೀಯ ಮಟ್ಟದ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಬೇಕಾಗಿದೆ, ಇಂತಹ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು ಉನ್ನತ ವಿಶ್ವವಿದ್ಯಾಲಯಗಳಿಗೆ ಮಾತ್ರ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಡಿಯಲ್ಲಿ ವಿಶ್ವದರ್ಜೆಯ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಬೇಕು ಎಂದು ತಿಳಿಸಿದರು. ಈ ದಿಶೆಯಲ್ಲಿ ಸರ್ಕಾರವು ಮುಂದೆ ಬಂದು ರಾಮನಗರ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು ನಿರ್ಮಾಣ ಮಾಡಲು ತೀರ್ಮಾನಿಸಿರುವುದನ್ನು ಸ್ವಾಗತಿಸಿ ಕೈಜೋಡಿಸಬೇಕೆಂದು ಸಭೆಯಲ್ಲಿ |

ಕುಲಸಚಿವರು                                                  ಕುಲಪತಿಗಳು

| | |
|---|---|
| | ಕೋರಿದರು. ಈ ನಿಟ್ಟಿನಲ್ಲಿ ಸರ್ಕಾರದಿಂದ ಎರಡು ಪತ್ರಗಳು ವಿಶ್ವವಿದ್ಯಾಲಯಕ್ಕೆ ಬಂದಿದ್ದು ಸರ್ಕಾರದ ಆದೇಶವನ್ನು ಗೌರವಿಸಿ ಮುಂದಿನ ಕ್ರಮವನ್ನು ಜರುಗಿಸಬೇಕೆಂದು ಸಭೆಯಲ್ಲಿ ತಿಳಿಸಿದರು.<br><br>ಡಾ. ಶೋಭ ನಿಸ್ಸಿಮ್‌ಗೌಡರ್ ರವರು ಮಾತನಾಡಿ ಈಗಾಗಲೇ ಸಾಕಷ್ಟು ಚರ್ಚೆಗಳಾಗಿದ್ದು ವೃತಃ ಕಾಲಹರಣ ಮಾಡುವುದರ ಬದಲು ಮತ ಚಲಾಯಿಸುವುದರ ಮುಖಾಂತರ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಕೋರಿದರು.<br><br>ಡಾ. ವೇಣುಗೋಪಾಲ್‌ರವರು ಮಾತನಾಡಿ ರಾಮನಗರ ಜಿಲ್ಲೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣ ಮಾಡಲು ವಿಶ್ವವಿದ್ಯಾಲಯದ ಖಾತೆಯಿಂದ ಸರ್ಕಾರಕ್ಕೆ ಹಣ ಬಿಡುಗಡೆ ಮಾಡಲು ಆದೇಶಿಸಿರುವುದು ಸೂಕ್ತವೆಂದು ತಿಳಿಸಿದರು. ಈಗಾಗಲೇ ಕೆಹೆಚ್‌ಎಆರ್‌ಡಿಪಿ ಸಂಸ್ಥೆಯು ಅನೇಕ ಉನ್ನತ ಮಟ್ಟದ ಕಟ್ಟಡ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕ ಸಂಶೋಧನೆಗೆ ಒತ್ತು ಕೊಡಲು ಸರ್ಕಾರದ ಪ್ರಸ್ತಾಪವನ್ನು ಅಂಗೀಕರಿಸಿ ಇಂದಿನ ಸಿಂಡಿಕೇಟ್ ಸಭೆಯಲ್ಲಿಯೇ ಹಣ ಬಿಡುಗಡೆ ಮಾಡುವ ಬಗ್ಗೆ ತೀರ್ಮಾನ ತೆಗೆದುಕೊಂಡು ಈ ದಿನವೇ ಹಣ ವರ್ಗಾವಣೆ ಮಾಡಿ ಇದೇ ತಿಂಗಳೊಳಗೆ ಶಂಕು ಸ್ಥಾಪನೆ ಮಾಡಬೇಕೆಂದು ಸಭೆಯಲ್ಲಿ ತಿಳಿಸಿದರು.<br><br>ಡಾ. ಶಿವಕುಮಾರ್ ಬಿ. ಲಕ್ಕೋಳ್‌ರವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ ಸದರಿ ಜಮೀನು ವ್ಯಾಜ್ಯಮುಕ್ತವಾದ ನಂತರ ಯಾವುದೇ ಅಡತಡೆಗಳಿಲ್ಲದೆ ಸರಾಗವಾಗಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣ ಮಾಡಲು ಹಣ ಬಿಡುಗಡೆ ಮಾಡುವುದು ಸೂಕ್ತವೆಂದು ತಿಳಿಸಿದರು.<br><br>ಡಾ. ಕೃಷ್ಣ ಪ್ರಸಾದ್ ಎಮ್. ಎಸ್, ಸಿಂಡಿಕೇಟ್ ಸದಸ್ಯರು ಎಲ್ಲಾ ಸಿಂಡಿಕೇಟ್ ಸದಸ್ಯರ ಒಮ್ಮತದ ಅಭಿಪ್ರಾಯ ಪಡೆದು ಕ್ಯಾಂಪಸ್ ನಿರ್ಮಾಣ ಮಾಡುವುದು ಸೂಕ್ತವೆಂದು ತಿಳಿಸಿದರು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಡಿಯಲ್ಲಿ ಅನೇಕ ಆರೋಗ್ಯ ವಿಜ್ಞಾನಗಳ ವಿದ್ಯಾರ್ಥಿಗಳು ತಮ್ಮ ಪದವಿಯನ್ನು ಪಡೆಯುತ್ತಿದ್ದು ಈ ಎಲ್ಲಾ ವಿದ್ಯಾರ್ಥಿಗಳ ಪ್ರವೇಶ ಅಥವಾ ಪರೀಕ್ಷಾ ಶುಲ್ಕದಿಂದ ಹಣದ ಸಂಗ್ರಹಣವಾಗಿದ್ದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಕೇವಲ ವೈದ್ಯಕೀಯ ಕಾಲೇಜು ನಿರ್ಮಾಣ ಮಾಡುವುದರ ಬಗ್ಗೆ ಚರ್ಚಿಸುತ್ತಿರುವುದು ಸೂಕ್ತವಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಮುಂದುವರೆದು, ಈ ಕ್ಯಾಂಪಸ್‌ನಲ್ಲಿ ಎಲ್ಲಾ ನಿಕಾಯದ ಕಾಲೇಜುಗಳು ಸ್ಥಾಪನೆ ಮಾಡುವುದು ಸೂಕ್ತವೆಂದು ತಿಳಿಸಿದರು. ಈ ನಿಟ್ಟಿನಲ್ಲಿ ಇನ್ನೂ ಅನೇಕ ವಿಷಯಗಳು ಇತ್ಯರ್ಥವಾಗದೆ ಇರುವುದರಿಂದ ಇಷ್ಟೊಂದು ತ್ವರಿತವಾಗಿ ಹಣ ಬಿಡುಗಡೆ ಮಾಡುವುದರ ಬಗ್ಗೆ ತಮ್ಮ ಸಹಮತ ಇಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. |

ಕುಲಸಚಿವರು ಕುಲಪತಿಗಳು

| | |
|---|---|
| | ಡಾ. ಮೋನಿಕಾ ಕೃಷ್ಣಪ್ಪರವರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಸಾಕಷ್ಟು ಹಣದ ಸಂಗ್ರಹವಾಗಿರುವುದರಿಂದ ಎಲ್ಲಾ ನಿಕಾಯದ ಕಾಲೇಜುಗಳನ್ನು ಸ್ಥಾಪಿಸಬಹುದು. ಆದುದರಿಂದ ಹಣ ಬಿಡುಗಡೆ ಮಾಡುವುದು ಸೂಕ್ತವೆಂದು ಸಹಮತ ವ್ಯಕ್ತಪಡಿಸಿದರು.<br><br>ಶ್ರೀ. ನವೀನ್ ರಾಜ್ ಸಿಂಗ್, ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ) ಹಾಗೂ ಸಿಂಡಿಕೇಟ್ ಸದಸ್ಯರು ಇವರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಸರ್ಕಾರದ ಒಂದು ಅವಿಭಾಜ್ಯ ಅಂಗವಾಗಿದ್ದು, ಸರ್ಕಾರದ ಆದೇಶ ಮತ್ತು ಮಾರ್ಗಸೂಚಿಗಳ ಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಈ ಹಿಂದಿನ ಹಾಗೂ ಹಾಲಿ ಸರ್ಕಾರಗಳು ಈಗಾಗಲೇ ಅರ್ಚಕರಹಳ್ಳಿ, ರಾಮನಗರ ಜಿಲ್ಲೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಾಣ ಮಾಡುವ ಬಗ್ಗೆ ಮತ್ತು ಹಣ ಬಿಡುಗಡೆ ಮಾಡುವ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಂಡಿರುತ್ತವೆ ಎಂದು ಸಭೆಗೆ ತಿಳಿಸಿದರು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮವೂ ಸಹ ಆರ್ಥಿಕ ವಿಚಾರವಾಗಿ ಸರ್ಕಾರದ ನಿರ್ಧಾರ ಅಂತಿಮ ಎಂದು ತಿಳಿಸುತ್ತದೆ. ಕೆಹೆಚ್‌ಎಆರ್‌ಡಿಪಿ ಸಂಸ್ಥೆಯು ಈಗಾಗಲೇ ಅನೇಕ ಸರ್ಕಾರಿ ಕಟ್ಟಡಗಳನ್ನು ನಿರ್ಮಿಸಿದ್ದು ಅದರ ಅಡಿಯಲ್ಲಿ ಕ್ಯಾಂಪಸ್ ನಿರ್ಮಾಣ ಮಾಡಬಹುದು ಮತ್ತು ಸದರಿ ಕ್ಯಾಂಪಸ್‌ನ ವಿನ್ಯಾಸವನ್ನು ಯಾರು ಬೇಕಾದರೂ ಅವಲೋಕಿಸಿ ಅಭಿಪ್ರಾಯ ವ್ಯಕ್ತಪಡಿಸಬಹುದೆಂದು ತಿಳಿಸಿದರು. ಈ ಹಿನ್ನೆಲೆಯಲ್ಲಿ ಹಣ ಬಿಡುಗಡೆ ಮಾಡುವುದರ ಬಗ್ಗೆ ತಮ್ಮ ಸಹಮತ ಇದೆ ಎಂದು ಸಭೆಗೆ ತಿಳಿಸಿದರು.<br><br>ಡಾ. ರಮೇಶ್ ಎನ್. ರೆಡ್ಡಿರವರು ಮಾತನಾಡಿ, ಎಲ್ಲಾ ಸಿಂಡಿಕೇಟ್ ಸದಸ್ಯರೂ ಸಹ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ತನ್ನ ಸ್ವಂತ ಕ್ಯಾಂಪಸ್ ಅನ್ನು ಹೊಂದುವುದು ಸೂಕ್ತವೆಂದು ಸದಭಿಪ್ರಾಯ ವ್ಯಕ್ತಪಡಿಸಿರುವುದನ್ನು ಸ್ವಾಗತಿಸಿದರು. ಆದರೆ ಸದರಿ ಜಮೀನು ಇನ್ನೂ ಸಹ ವ್ಯಾಜ್ಯಮುಕ್ತವಾಗದೆ ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಆಗಿರುವುದಿಲ್ಲ ಹಾಗೂ ಇಂತಹ ಪರಿಸ್ಥಿತಿಯಲ್ಲಿ ಹಣ ಬಿಡುಗಡೆ ಮಾಡುವುದು ಬೇಡ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.<br><br>ಶ್ರೀ. ಅನಿಲ್ ಕುಮಾರ್ ಟಿ.ಕೆ, ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಸಿಂಡಿಕೇಟ್ ಸದಸ್ಯರು ಇವರು ಮಾತನಾಡಿ, ಹಲವು ಸಿಂಡಿಕೇಟ್ ಸದಸ್ಯರು ಹಣ ಬಿಡುಗಡೆ ಮಾಡುವ ಬಗ್ಗೆ ನ್ಯಾಯಾಲಯದಲ್ಲಿ ವ್ಯಾಜ್ಯ ಹೂಡಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಿರುತ್ತಾರೆ. ಈ ಬಗ್ಗೆ ನ್ಯಾಯಾಲಯದಿಂದ ಯಾವುದಾದರೂ ಮಧ್ಯಂತರ ಆದೇಶ ಅಥವಾ ಪ್ರತಿಬಂಧಕಾಜ್ಞೆಗಳು ಹೊರಬಂದಿದ್ದಲ್ಲಿ ಸಭೆಯಲ್ಲಿ ತಿಳಿಸಬೇಕೆಂದು ಕೋರಿದರು. ಯಾವುದೇ ಆದೇಶಗಳು ಇಲ್ಲದಿದ್ದಲ್ಲಿ ಹಣ ಬಿಡುಗಡೆ ಮಾಡುವುದು ಸೂಕ್ತವೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. |

ಕುಲಸಚಿವರು ಕುಲಪತಿಗಳು

| | |
|---|---|
| | ಗೌರವಾನ್ವಿತ ಕುಲಪತಿಗಳು ಎಲ್ಲಾ ಸರ್ಕಾರಗಳು, ಸಿಂಡಿಕೇಟ್ ಸದಸ್ಯರುಗಳು ಹಾಗೂ ಹಿಂದಿನ ಎಲ್ಲಾ ಕುಲಪತಿಗಳು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ತನ್ನದೇ ಆದ ಕ್ಯಾಂಪಸ್ ಅನ್ನು ಹೊಂದುವುದು ಅವಶ್ಯಕವಾಗಿರುತ್ತದೆ ಎಂಬುದರ ಬಗ್ಗೆಎಂದು ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ ಎಂದು ಸಭೆಗೆ ತಿಳಿಸಿದರು. ಈ ಹಿಂದೆ ಸಚಿವ ಸಂಪುಟದಲ್ಲಿ ತೀರ್ಮಾನಿಸಿದಂತೆ ರಾಮನಗರ ಜಿಲ್ಲೆಯಲ್ಲಿ ನಿರ್ಮಾಣವಾಗುತ್ತಿರುವ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ವಿಶ್ವವಿದ್ಯಾಲಯದ ಆಡಳಿತ ಕಟ್ಟಡವನ್ನು ವಿಶ್ವವಿದ್ಯಾಲಯದ ವತಿಯಿಂದಲೇ ನಿರ್ಮಾಣ ಮಾಡುವುದೆಂದು ನಿರ್ಣಯಿಸಲಾಗಿದೆ. ಈ ಎಲ್ಲವನ್ನು ಈ ದಿನವೇ ಎಲ್ಲಾ ಸಿಂಡಿಕೇಟ್ ಸದಸ್ಯರುಗಳು ಸ್ಥಳ ಪರಿಶೀಲನೆ ಮಾಡಿ ಮುಂದಿನ ನಿರ್ಧಾರ ಮಾಡುವುದು ಸೂಕ್ತವೆಂದು ಸಭೆಗೆ ಸೂಚಿಸಿದರು. ಮುಂದುವರೆದು, ಹಣ ಬಿಡುಗಡೆ ಮಾಡುವ ಬಗ್ಗೆ ಹಂತ ಹಂತವಾಗಿ ಬಿಡುಗಡೆ ಮಾಡಬೇಕೇ ಅಥವಾ ಒಂದೇ ಕಂತಿನಲ್ಲಿ ಬಿಡುಗಡೆ ಮಾಡಬೇಕೇ ಎಂಬುದನ್ನು ನಿರ್ಣಯಿಸಬೇಕೆಂದು ತಿಳಿಸಿದರು. ಈ ನಿಟ್ಟಿನಲ್ಲಿ ಎಲ್ಲಾ ಸಿಂಡಿಕೇಟ್ ಸದಸ್ಯರು ಭಾವನಾತ್ಮಕವಾಗಿ ಯೋಚಿಸದೆ ವಾಸ್ತವಾಂಶವನ್ನು ತಿಳಿದು ನಿರ್ಧಾರಗಳನ್ನು ಮಾಡಬೇಕೆಂದು ಕೋರಿದರು. ಹಣ ಬಿಡುಗಡೆ ಮಾಡುವ ಬಗ್ಗೆ ಈಗಾಗಲೇ ನ್ಯಾಯಾಲಯಗಳಲ್ಲಿ ವ್ಯಾಜ್ಯವಿರುವುದರಿಂದ ತಾವು ಹಣ ಬಿಡುಗಡೆ ಮಾಡುವ ಯಾವುದೇ ನಿರ್ಧಾರವು ವಿಚಾರಣಾಧೀನ (Sub-judice) ಆಗುವುದೇ ಎಂಬುದರ ಬಗ್ಗೆ ಕಾನೂನು ತಜ್ಞರ ಸಲಹೆಯನ್ನು ಪಡೆದು ಹಾಗೂ ಗೌರವಾನ್ವಿತ ಕುಲಾಧಿಪತಿಗಳ ಅಭಿಪ್ರಾಯವನ್ನು ಪಡೆಯಲು ಕಾಲಾವಕಾಶ ಕೋರಿ ಸಿಂಡಿಕೇಟ್ ಸಭೆಯಲ್ಲಿ ತಿಳಿಸಿದರು.<br><br>ಅನೇಕ ಸಿಂಡಿಕೇಟ್ ಸದಸ್ಯರು ಈಗಾಗಲೇ ವೃತ ಚರ್ಚೆಗಳನ್ನು ಮಾಡಿ ಕಾಲಹರಣವಾಗುತ್ತಿದ್ದು ಹಣ ಬಿಡುಗಡೆ ಮಾಡುವ ಬಗ್ಗೆ ಮತ ಚಲಾಯಿಸಿ ನಿರ್ಣಯಿಸಬೇಕೆಂದು ಒತ್ತಡ ಹೇರಿದರು. ಅನೇಕ ಸಿಂಡಿಕೇಟ್ ಸದಸ್ಯರು ಇಂದೇ ಹಣ ಬಿಡುಗಡೆ ಮಾಡಬೇಕೆಂದು ಹಾಗೂ ಇದೇ ತಿಂಗಳಿನಲ್ಲಿ ಶಂಕುಸ್ಥಾಪನೆ ಮಾಡಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಒತ್ತಾಯಿಸಿದರು. ಸದರಿ ಯೋಜನೆಯ ಶಂಕು ಸ್ಥಾಪನೆ ಮಾಡುವುದರಿಂದ ಅತ್ಯಂತ ಕಡಿಮೆ ಅವಧಿ ಉಳಿದಿರುವ ಪ್ರಸ್ತುತ ಅಧಿಕಾರದಲ್ಲಿರುವ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕೆಂದು ಅತಿ ಜರೂರಾಗಿ ಇಂದೇ ಹಣ ಬಿಡುಗಡೆ ಮಾಡುವ ಬಗ್ಗೆ ನಿರ್ಣಯವಾಗಬೇಕೆಂದು ಒತ್ತಾಯ ಮಾಡಿದರು.<br><br>ಮಾನ್ಯ ಸಿಂಡಿಕೇಟ್ ಸದಸ್ಯರ ಒತ್ತಾಯದಂತೆ ಅಧ್ಯಕ್ಷರು ಕೈ ಎತ್ತುವ ಮೂಲಕ ಮತ ಚಲಾಯಿಸಲು ಸಿಂಡಿಕೇಟ್ ಸದಸ್ಯರುಗಳಿಗೆ ಕೋರಿದರು. ಇದರಂತೆ ರಾಮನಗರ ಜಿಲ್ಲೆಯಲ್ಲಿ ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ಮಿಸಲು ಸರ್ಕಾರದ ಆದೇಶದಂತೆ ಒಟ್ಟು ರೂ. 600 ಕೋಟಿಗಳಲ್ಲಿ ಶೇ.50ರಷ್ಟು ಮೊತ್ತವಾದ ರೂ. 300 ಕೋಟಿಗಳನ್ನು ಬಿಡುಗಡೆ ಮಾಡುವುದರ ಬಗ್ಗೆ ಹಾಜರಿದ್ದ ಒಟ್ಟು ಸದಸ್ಯರುಗಳಲ್ಲಿ 18 ಸಿಂಡಿಕೇಟ್ ಸದಸ್ಯರುಗಳು ಹಣ ಬಿಡುಗಡೆ ಮಾಡಲು ಸಹಮತ ವ್ಯಕ್ತಪಡಿಸಿದರು ಮತ್ತು 4 ಸಿಂಡಿಕೇಟ್ ಸದಸ್ಯರುಗಳು ವಿರುದ್ಧ ಮತ ಚಲಾಯಿಸಿದರು. |

ಕುಲಸಚಿವರು

ಕುಲಪತಿಗಳು

| | |
|---|---|
| ಸಿಂಡಿಕೇಟ್ ನಿರ್ಣಯ | ಸಚಿವ ಸಂಪುಟದ ನಿರ್ಣಯದಂತೆ ಶೇಕಡ 50ರಷ್ಟು ಮೊತ್ತವಾದ ರೂ. 300 ಕೋಟಿಗಳನ್ನು ಬಿಡುಗಡೆ ಮಾಡಲು ಅನುಮೋದನೆ ನೀಡಲಾಯಿತು. |
| 7 (ii) | Transfer of funds to Bheemanakuppe project. |
| ಚರ್ಚೆ | ಗೌರವಾನ್ವಿತ ಕುಲಪತಿಗಳು ಭೀಮನಕುಪ್ಪೆಯಲ್ಲಿ ರಾಜೀವ್ ಗಾಂಧಿ ಸಾರ್ವಜನಿಕ ಆರೋಗ್ಯ ಸಂಸ್ಥೆ ಮತ್ತು ರೋಗ ನಿಯಂತ್ರಣ ಕೇಂದ್ರ, ಸುಧಾರಿತ ಸಂಶೋಧನಾ ಕೇಂದ್ರ ಮತ್ತು ವಿದ್ಯಾರ್ಥಿ ನಿಲಯಗಳ ಕಟ್ಟಡಗಳನ್ನು ನಿರ್ಮಾಣ ಮಾಡುವ ಬಗ್ಗೆ ಸವಿಸ್ತಾರವಾಗಿ ಸಭೆಯಲ್ಲಿ ವಿವರಿಸಿದರು.<br><br>ಸರ್ಕಾರಿ ಆದೇಶ ಸಂಖ್ಯೆ: ಆರ್.ಡಿ:9:ಎಲ್.ಜಿ.ಬಿ:2001/ಬೆಂಗಳೂರು ದಿನಾಂಕ 13.12.2001 ರಲ್ಲಿ ಘನ ಸರ್ಕಾರವು ಭೀಮನಕುಪ್ಪೆ ಗ್ರಾಮದ ಸರ್ವೆ ನಂ: 73ರಲ್ಲಿ 50 ಎಕರೆ ಜಮೀನನ್ನು ಎಕರೆ ಒಂದಕ್ಕೆ ರೂ.10,000/–ದಂತೆ ಬೆಲೆ ನಿಗಧಿಪಡಿಸಿ ರಾ.ಗಾ.ಆ.ವಿ.ವಿಶ್ವವಿದ್ಯಾಲಯಕ್ಕೆ ಮಂಜೂರು ಮಾಡಲಾಗಿರುತ್ತದೆ.<br><br>ಸದರಿ ಜಮೀನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸ್ವಾಧೀನದಲ್ಲಿದ್ದು ಯಾವುದೇ ನ್ಯಾಯಾಲಯಗಳಲ್ಲಿ ದಾವೆಗಳು ಇಲ್ಲದೆ ವ್ಯಾಜ್ಯಮುಕ್ತ ಜಮೀನಾಗಿರುತ್ತದೆ.<br><br>ದಿನಾಂಕ 30.11.2019ರಂದು ನಡೆದ 146ನೇ ಸಿಂಡಿಕೇಟ್ ಸಭೆಯಲ್ಲಿ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಭೀಮನಕುಪ್ಪೆ ಸರ್ವೆ ನಂ. 73ರಲ್ಲಿ ರಾಜೀವ್ ಗಾಂಧಿ ಸಾರ್ವಜನಿಕ ಆರೋಗ್ಯ ಸಂಸ್ಥೆ ಮತ್ತು ರೋಗ ನಿಯಂತ್ರಣ ಕೇಂದ್ರ, ಸುಧಾರಿತ ಸಂಶೋಧನಾ ಕೇಂದ್ರ ಮತ್ತು ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಲು ರೂ. 170 ಕೋಟಿಗಳ ಪ್ರಸ್ತಾವನೆಗೆ ಅನುಮೋದನೆ ನೀಡಲಾಯಿತು.<br><br>ಸದರಿ ಕಾಮಗಾರಿಗೆ ವಿಶ್ವವಿದ್ಯಾಲಯದ ವತಿಯಿಂದ ಇ-ಪೋರ್ಟಲ್‌ನಲ್ಲಿ ಎಮ್ ಇ/2020-21/ಬಿಡಿ/ವರ್ಕ್ ಇಂಡೆಂಟ್ /229 ರಲ್ಲಿ ದರ ರೂ. 13434.00 ಲಕ್ಷಗಳು ದಿನಾಂಕ 05.10.2020ರಂದು ಕರೆಯಲಾಗಿದ್ದು ಸದರಿ ಇ-ಟೆಂಡರ್ ಆಡಳಿತಾತ್ಮಕ ಕಾರಣಗಳಿಂದ ದಿನಾಂಕ 23.12.2020ರಂದು ರದ್ದುಗೊಂಡಿರುತ್ತದೆ.<br><br>ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ ಇವರಿಗೆ ಮತ್ತೊಮ್ಮೆ ಟೆಂಡರ್ ಕರೆದು ಕಾಮಗಾರಿಯನ್ನು ವಿಶ್ವವಿದ್ಯಾಲಯದ ವತಿಯಿಂದ ಪ್ರಾರಂಭಿಸಲು ದಿನಾಂಕ 11.02.2021ರಲ್ಲಿ ಆದೇಶ ಕೋರಿ ಪತ್ರ ಬರೆಯಲಾಗಿರುತ್ತದೆ.<br><br>ಸದರಿ ಪತ್ರದಂತೆ ಸಚಿವ ಸಂಪುಟದಲ್ಲಿ ಅನುಮೋದನೆಗೊಂಡ ನಂತರ ಸರ್ಕಾರದ ವತಿಯಿಂದ ಆದೇಶ ಪತ್ರ ದಿನಾಂಕ 29.03.2022ರಂದು ವಿಶ್ವವಿದ್ಯಾಲಯಕ್ಕೆ ಬಂದಿರುತ್ತದೆ. |

ಕುಲಸಚಿವರು

ಕುಲಪತಿಗಳು

ದಿನಾಂಕ 07.07.2022ರ ಪತ್ರದಲ್ಲಿ ಸರ್ಕಾರದ ಕಾರ್ಯದರ್ಶಿರವರು ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ನಿರ್ಮಾಣ ಕಾಮಗಾರಿಯನ್ನು ಇಂಜಿನಿಯರಿಂಗ್ ಘಟಕ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000ರನ್ವಯ ಹಾಗೂ ಆರ್ಥಿಕ ಇಲಾಖೆಯು ಕಾಲಕಾಲಕ್ಕೆ ಹೊರಡಿಸುವ ಆದೇಶ/ಮಾರ್ಗಸೂಚಿಗಳು/ಸುತ್ತೋಲೆಗಳನ್ವಯ ನಿರ್ವಹಿಸುವಂತೆ ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಹಾಗೂ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅನುಮೋದನೆಗೊಂಡ ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರಿಗೆ ಪತ್ರವನ್ನು ಬರೆಯಲಾಗಿದ್ದು ಸದರಿ ಪತ್ರದ ಪ್ರತಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ಅದರಂತೆ ದಿನಾಂಕ 13.08.2022ರಂದು "ದಿ ಹಿಂದು" ದಿನಪತ್ರಿಕೆಯಲ್ಲಿ ಸದರಿ ಕಾಮಗಾರಿಗೆ ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ವತಿಯಿಂದ ಟೆಂಡರ್ ಪ್ರಕಟಣೆಯನ್ನು ನೀಡಲಾಗಿರುತ್ತದೆ.

ದಿನಾಂಕ 23.08.2022 ರಂದು ನಡೆದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ತುರ್ತು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ,

**"ಸುದೀರ್ಘ ಚರ್ಚೆಯ ನಂತರ, ರಾಜೀವ್ ಗಾಂಧಿ ಅರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಾರ್ವಜನಿಕ ಆರೋಗ್ಯ ಸಂಸ್ಥೆ ಮತ್ತು ರೋಗ ನಿಯಂತ್ರಣ ಕೇಂದ್ರವು ಈಗ ಅಸ್ತಿತ್ವದಲ್ಲಿ ಇರುವುದಿಲ್ಲ ಹಾಗೂ ಸುಧಾರಿತ ಸಂಶೋಧನಾ ಕೇಂದ್ರ ನಡೆಸಲು ನಮ್ಮಲ್ಲಿ ಮಾನವ ಸಂಪನ್ಮೂಲ ಲಭ್ಯವಿರುವುದಿಲ್ಲ. ಇದರ ಬಗ್ಗೆ ಸಂಶೋಧನಾ ಸಂಸ್ಥೆಯಾದ ಭಾರತೀಯ ವಿಜ್ಞಾನ ಸಂಸ್ಥೆಯೊಂದಿಗೆ ವಿಸ್ತೃತವಾದ ಚರ್ಚೆಯ ಅಗತ್ಯತೆ ಇದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅವಶ್ಯಕತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಭೀಮನಕುಪ್ಪೆ ಯೋಜನೆಯಲ್ಲಿ ಅಮೂಲಾಗ್ರ ಬದಲಾವಣೆಗಳನ್ನು ಮಾಡಿ ಮರುಪ್ರಸ್ತಾವನೆಯನ್ನು ಸಲ್ಲಿಸಲು ಮತ್ತು ಈ ಸಂಬಂಧ ಕಾಲಾವಕಾಶ ಕೋರಲು ಸಚಿವ ಸಂಪುಟಕ್ಕೆ ಸಲ್ಲಿಸಲು ತೀರ್ಮಾನಿಸಲಾಯಿತು. ಈಗ ಪ್ರಾರಂಭಿಸಿರುವ ಪ್ರಕ್ರಿಯೆಯನ್ನು ಸದ್ಯಕ್ಕೆ ಸ್ಥಗಿತಗೊಳಿಸಲು ಸರ್ಕಾರವನ್ನು ಕೋರಲು ಸಭೆಯು ನಿರ್ಧರಿಸಿತು."**

ಸರ್ಕಾರದ ಆದೇಶ ಸಂಖ್ಯೆ. ಎಂಇಡಿ 42 ಆರ್ ಜಿಯು 2021, ಬೆಂಗಳೂರು ದಿನಾಂಕ: 18.11.2022ರಲ್ಲಿ ಶ್ರೀ ಸರ್ದಾರ್ ವಲ್ಲಭಬಾಯಿ ಪಟೇಲ್ ಸಾರ್ವಜನಿಕ ಆರೋಗ್ಯ ಸಂಸ್ಥೆ, ರೋಗ ನಿಯಂತ್ರಣ ಕೇಂದ್ರ, ಸುಧಾರಿತ ಸಂಶೋಧನಾ ಕೇಂದ್ರ ಎಂದು ನಾಮಾಂಕಿತಗೊಳಿಸಿ ಆದೇಶಿಸಲಾಗಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಭೀಮನಕುಪ್ಪೆ ಗ್ರಾಮದ ಸರ್ವೇ ನಂ. 73 ರಲ್ಲಿ ರಾಜೀವ್ ಗಾಂಧಿ ಆರೋಗ್ಯ ಸಂಸ್ಥೆ ಮತ್ತು ರೋಗ ನಿಯಂತ್ರಣ

**ಕುಲಸಚಿವರು** **ಕುಲಪತಿಗಳು**

| | |
|---|---|
| | ಕೇಂದ್ರ, ಸುಧಾರಿತ ಸಂಶೋಧನಾ ಕೇಂದ್ರ ಮತ್ತು ವಿದ್ಯಾರ್ಥಿ ನಿಲಯ ಕಟ್ಟಡಕ್ಕೆ ಶ್ರೀ ಸರ್ದಾರ್ ವಲ್ಲಭಾಬಾಯಿ ಪಟೇಲ್ ಸಾರ್ವಜನಿಕ ಆರೋಗ್ಯ ಸಂಸ್ಥೆ, ರೋಗ ನಿಯಂತ್ರಣ ಕೇಂದ್ರ, ಸುಧಾರಿತ ಸಂಶೋಧನಾ ಕೇಂದ್ರ ಕಾಮಾಗಾರಿಯನ್ನು ರೂ.200.00 ಕೋಟಿಗಳ ವೆಚ್ಚದಲ್ಲಿ ನಿರ್ಮಿಸಲು ಹಾಗೂ ಸದರಿ ವೆಚ್ಚವನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಪನ್ಮೂಲದಿಂದ ಬರಿಸಲು ಆಡಳಿತತಾತ್ಮಕ ಅನುಮೋದನೆ ನೀಡಲಾಗಿರುತ್ತದೆ, ಸದರಿ ಕಾಮಗಾರಿಯ ನಿರ್ಮಾಣವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ಘಟಕದಿಂದ ನಿರ್ಮಿಸಲು ವಿಶ್ವವಿದ್ಯಾಲದವತಿಯಿಂದ ತಯಾರಿಸಿರುವ ಅಂದಾಜು ಪಟ್ಟಿ ಮತ್ತು ಕಟ್ಟಡದ ನಕ್ಷೆಯ ದೃಢೀಕೃತ ಪ್ರತಿಗಳನ್ನು ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿಯನಿರಿಂಗ್ ಘಟಕದಿಂದ ನಿರ್ವಹಿಸಲು ಆದೇಶಿಸಲಾಯಿತು ಹಾಗೂ ಕಾಮಗಾರಿಯನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ, 1999 ಮತ್ತು ಅದರ ಅಡಿಯಲ್ಲಿ ರಚಿತವಾಗಿರುವ ನಿಯಮಗಳ ಅಡಿಯಲ್ಲಿ ಹಾಗೂ ತತ್ಸಂಬಂಧಿತವಾಗಿ ಅರ್ಥಿಕ ಇಲಾಖೆಯು ಕಾಲಕಾಲಕ್ಕೆ ಹೊರಡಿಸಲಾಗುವ ಮಾರ್ಗಸೂಚಿಗಳು/ಸುತ್ತೋಲೆಗಳು ಮತ್ತು ಆದೇಶಗಳನ್ವಯ ನಿರ್ವಹಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರ್ ವಿಭಾಗಕ್ಕೆ ಸೂಚಿಸಲಾಗಿದ್ದು, ಸದರಿ ಕಾಮಾಗಾರಿಗೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆಗಳ ಬಗ್ಗೆ ಮುಂದಿನ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ನಿರ್ದೇಶಿಸಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.<br><br>ದಿನಾಂಕ: 14.12.2022 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಸದರಿ ವಿಷಯವನ್ನು ಚರ್ಚಿಸಲಾಗಿದ್ದು, ಈ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಸರ್ಕಾರಕ್ಕೆ ಇಂದೇ ಪತ್ರ ಬರೆಯಲು ಸರ್ಕಾರದ ಕಾರ್ಯದರ್ಶಿಗಳು ವೈದ್ಯಕೀಯ ಶಿಕ್ಷಣ ಇಲಾಖೆ ರವರು ಸಭೆಯಲ್ಲಿ ಕೋರಿರುವುದರಿಂದ ಗೌರವಾನ್ವಿತ ಕುಲಪತಿಗಳು ದಿನಾಂಕ 23.08.2022ರ ಮತ್ತು 24.11.2022ರ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಇಂದೆ ಸರ್ಕಾರಕ್ಕೆ ಪತ್ರ ಬರೆಯುವುದಾಗಿ ಸಭೆಯಲ್ಲಿ ತಿಳಿಸಿದರು.<br><br>ದಿನಾಂಕ: 14.12.2022 ರಂದು ಕಾರ್ಯದರ್ಶಿಗಳು (ವೈದ್ಯಕೀಯ ಶಿಕ್ಷಣ ಇಲಾಖೆ) ಇವರಿಗೆ ಬರೆದ ಪತ್ರದಲ್ಲಿ "ಸಿಂಡಿಕೇಟ್ ಸಭೆಯ ನಿರ್ಣಯದಂತೆ, ವಿಶ್ವವಿದ್ಯಾಲಯದಲ್ಲಿ ಆರ್.ಜಿ.ಐ.ಪಿ.ಹೆಚ್ ಕೋರ್ಸು ನಡೆಸುತ್ತಿಲ್ಲವಾದ್ದರಿಂದ ಮತ್ತು ಸಂಶೋಧನೆ ಕಾರ್ಯನಿರ್ವಹಿಸಲು ಮಾನವ ಸಂಪನ್ಮೂಲದ ಕೊರತೆ ಇರುವ ಕಾರಣ ಭೀಮನಕುಪ್ಪೆಯಲ್ಲಿ ನಿರ್ಮಾಣ ಮಾಡಬೇಕೆಂದಿರುವ ಕಟ್ಟಡ ವಾಸ್ತವದಲ್ಲಿ ಅನುಪಯುಕ್ತವಾಗಬಹುದಾಗಿದ್ದು ಸದ್ಯದ ಪರಿಸ್ಥಿತಿಯಲ್ಲಿ ಯೋಜನೆಯ ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸಿ ಮತ್ತು ಮುಂದಿನ ಪರಿಸ್ಥಿತಿಗೆ ಅನುಗುಣವಾಗಿ ಹೊಸ ಯೋಜನೆಯನ್ನು ರೂಪಿಸಿ ಸರ್ಕಾರದ ಹಂತದಲ್ಲಿ ಚರ್ಚಿಸಿ ಮುಂದಿನ ರೂಪುರೇಷೆಗಳನ್ನು ತೀರ್ಮಾನಿಸಲಾಗುವುದು ಎಂದು ತಿಳಿಸುತ್ತಾ ಹಾಲಿ ಚಾಲ್ತಿಯಲ್ಲಿರುವ ಯೋಜನೆಯನ್ನು ಸದ್ಯಕ್ಕೆ ಸ್ಥಗಿತಗೊಳಿಸಲು ಕೋರಲಾಗಿದೆ". |

ಕುಲಸಚಿವರು

ಕುಲಪತಿಗಳು

| | |
|---|---|
| | ಮಾನ್ಯ ಸಿಂಡಿಕೇಟ್ ಸದಸ್ಯರುಗಳು ಭೀಮನಕುಪ್ಪೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ಸಂಸ್ಥೆ ಮತ್ತು ರೋಗ ನಿಯಂತ್ರಣ ಕೇಂದ್ರ, ಸುಧಾರಿತ ಸಂಶೋಧನಾ ಕೇಂದ್ರ ಮತ್ತು ವಿದ್ಯಾರ್ಥಿ ನಿಲಯ ಕಟ್ಟಡ ಮತ್ತು ಶ್ರೀ ಸರ್ದಾರ್ ವಲ್ಲಭಾಬಾಯಿ ಪಟೇಲ್ ಸಾರ್ವಜನಿಕ ಆರೋಗ್ಯ ಸಂಸ್ಥೆ, ರೋಗ ನಿಯಂತ್ರಣ ಕೇಂದ್ರ, ಸುಧಾರಿತ ಸಂಶೋಧನಾ ಕೇಂದ್ರ ನಿರ್ಮಿಸಲು ಸರ್ಕಾರದ ಆದೇಶದಂತೆ ಹಣ ಬಿಡುಗಡೆ ಮಾಡುವ ಬಗ್ಗೆ ತೀರ್ಮಾನಿಸಲು ತಿಳಿಸಿದರು.<br><br>ಮಾನ್ಯ ಅಧ್ಯಕ್ಷರು ಸರ್ಕಾರದ ಆದೇಶದಂತೆ ಒಟ್ಟು ರೂ. 200 ಕೋಟಿಗಳಲ್ಲಿ ಶೇ. 50ರಷ್ಟು ಮೊತ್ತವಾದ ರೂ. 100 ಕೋಟಿಗಳನ್ನು ಬಿಡುಗಡೆ ಮಾಡುವ ಬಗ್ಗೆ ಚರ್ಚಿಸಲು ಕೋರಿದರು. ಆಗ ಸದಸ್ಯರು ಕೈ ಎತ್ತುವ ಮೂಲಕ ಮತ ಚಲಾಯಿಸಿ ಬಿಡುಗಡೆ ಮಾಡಲು ನಿರ್ಧರಿಸಿದರು. ಅದರಂತೆ ಹಾಜರಿದ್ದ ಒಟ್ಟು ಸದಸ್ಯರುಗಳಲ್ಲಿ 18 ಸಿಂಡಿಕೇಟ್ ಸದಸ್ಯರುಗಳು ಹಣ ಬಿಡುಗಡೆ ಮಾಡುವ ಬಗ್ಗೆ ಸಹಮತ ವ್ಯಕ್ತಪಡಿಸಿದರು ಮತ್ತು 3 ಸಿಂಡಿಕೇಟ್ ಸದಸ್ಯರುಗಳು ವಿರುದ್ಧ ಮತ ಚಲಾಯಿಸಿದರು ಹಾಗೂ 1 ಸಿಂಡಿಕೇಟ್ ಸದಸ್ಯರು ಯಾವುದೇ ನಿರ್ಧಾರ ವ್ಯಕ್ತಪಡಿಸಿರುವುದಿಲ್ಲ. |
| ಸಿಂಡಿಕೇಟ್ ನಿರ್ಣಯ | ಸರ್ಕಾರದ ನಿರ್ಣಯದಂತೆ ರೂ. 200 ಕೋಟಿ ಮೊತ್ತದ ಶೇಕಡ 50ರಷ್ಟು ಅಂದರೆ ರೂ. 100 ಕೋಟಿಗಳನ್ನು ಬಿಡುಗಡೆ ಮಾಡಲು ಅನುಮೋದನೆ ನೀಡಲಾಯಿತು. |
| | **Dessent Note for Agenda 7** |
| | The following four Syndicate members expressed dissent note for agenda No. 7 (for Bheemanakuppe and Ramanagara project) and submitted signed dessent note to the Chairman of the Syndicate. The copy of the dissent note is enclosed along with the proceedings. **(Annexure-1)**<br><br>1. Dr. Anand S. Kirishal<br>2. Dr. Ramesh N. Reddy<br>3. Dr. Krishna Prasad<br>4. Dr. Shivakumar Lakkol |
| (8) | To discuss regarding Admission Approval of 210 MBBS students. Letter issued by Hon'ble Minister for Medical Education Ref. NO. AKUKA/ VISHIS/3440/2022, Dated 31.01.2023. |
| ಚರ್ಚೆ | **2018–19ನೇ ಸಾಲಿನಲ್ಲಿ ಕೆ.ಇ.ಎ ಪ್ರವೇಶಾದೇಶ ಇಲ್ಲದೇ ಪ್ರವೇಶ ಹೊಂದಿದ ವಿದ್ಯಾರ್ಥಿಗಳ ಪ್ರವೇಶಾನುಮೋದನೆ ಬಗ್ಗೆ ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಂತೆ ನಿರ್ಧಾರ ಕೈಗೊಂಡಿರುವ ಬಗ್ಗೆ ಸಿಂಡಿಕೇಟ್ ಸದಸ್ಯರಿಗೆ ಕೆಳಕಂಡ ಮಾಹಿತಿಯನ್ನು ಒದಗಿಸಲಾಯಿತು** |

**ಕುಲಸಚಿವರು** **ಕುಲಪತಿಗಳು**

2018–19ನೇ ಸಾಲಿನಲ್ಲಿ 16 ಖಾಸಗಿ ಕಾಲೇಜುಗಳ 210 ವಿದ್ಯಾರ್ಥಿಗಳ ಪ್ರವೇಶಾನುಮೋದನೆ ಬಗ್ಗೆ ವಿಶ್ವವಿದ್ಯಾಲಯವು ಸರ್ಕಾರದ ನಿರ್ದೇಶನವನ್ನು ಕೋರಲಾಗಿತ್ತು.

ಈ ಹಿಂದೆ, ದಿನಾಂಕ 22.06.2019ರ ಸರ್ಕಾರದ ಪತ್ರದಲ್ಲಿ ಸದರಿ ವಿದ್ಯಾರ್ಥಿಗಳಿಗೆ ಮೊದಲನೇ ವರ್ಷದ ಎಂ.ಬಿ.ಬಿ.ಎಸ್. ಪರೀಕ್ಷೆಯನ್ನು ಬರೆಯಲು ಅನುಮತಿ ನೀಡಲಾಗಿತ್ತು ನಂತರ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಇವರ ದಿನಾಂಕ 12.09.2019 ರ ಪತ್ರದಲ್ಲಿ ಸರ್ಕಾರದ ಆದೇಶದಂತೆ ಸದರಿ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸಲು ಸೂಚಿಸಲಾಗಿತ್ತು. ಅದರಂತೆ, ವಿಶ್ವವಿದ್ಯಾಲಯದಿಂದ ಫಲಿತಾಂಶವನ್ನು ಪ್ರಕಟಿಸಲಾಗಿತ್ತು.

ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ ಆಕುಕ 331 ಆರ್‌ಜಿಯು 2018(ಭಾ–1) ದಿನಾಂಕ 01.03.2021 ರಲ್ಲಿ ಈ ಪ್ರಕರಣವನ್ನು ಅನುಮೋದಿಸಲು/ಪರಿಹರಿಸಲು ಅಥವಾ ಪ್ರವೇಶಾತಿಗೆ ಸಂಬಂಧಿಸಿದಂತೆ ಅನುಮತಿ ನೀಡುವ ಬಗ್ಗೆ ಎಂಸಿಐ ನಿಯಮಗಳನ್ವಯ ರಾಜ್ಯ ಸರ್ಕಾರವು ಯಾವುದೇ ಅಧಿಕಾರವನ್ನು ಹೊಂದಿರುವುದಿಲ್ಲ. ಈ ಬಗ್ಗೆ ವಿಶ್ವವಿದ್ಯಾಲಯದ ಹಂತದಲ್ಲಿಯೇ ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮ ವಹಿಸುವಂತೆ ತಿಳಿಸಲಾಗಿರುತ್ತದೆ.

ಅಷ್ಟರಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರವೇಶಾನುಮೋದನೆಗಾಗಿ ಮಾನ್ಯ ನ್ಯಾಯಾಲಯದ ಮೊರೆಹೋಗಿದ್ದು, ಮಾನ್ಯ ನ್ಯಾಯಾಲಯದ ಆದೇಶದಂತೆ, ಈ ವಿದ್ಯಾರ್ಥಿಗಳು ತಮ್ಮ ಮುಂದಿನ ವರ್ಷಗಳ ಎಂ.ಬಿ.ಬಿ.ಎಸ್. ಪರೀಕ್ಷೆಗೆ ಹಾಜರಾಗಿರುತ್ತಾರೆ ಹಾಗೂ ನ್ಯಾಯಾಲಯದ ಆದೇಶದಂತೆ ಫಲಿತಾಂಶವನ್ನು ಪ್ರಕಟಿಸಲಾಗಿರುತ್ತದೆ.

ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 201265/2021(EDN-MED-ADM) C/W, 200456/2021 (EDN-EX) ರ ದಿನಾಂಕ 24.05.2022 ರಂದು ಕೆಳಕಂಡಂತೆ ಆದೇಶಿಸಿರುತ್ತದೆ.

*"As we have noticed that the University has to take a decision at the earliest with regard to according approval for the admission of the petitioners, we direct the University to take a decision in this regard within a week from today".*

ಕುಲಸಚಿವರು ಕುಲಪತಿಗಳು

| | |
|---|---|
| | ಮಾನ್ಯ ಕುಲಪತಿಗಳ ಆದೇಶದಂತೆ ಸದರಿ ವಿದ್ಯಾರ್ಥಿಗಳ ಪ್ರವೇಶಾನುಮೋದನೆಗೆ ವಿಶ್ವವಿದ್ಯಾಲಯದಲ್ಲಿ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಸೂಕ್ತ ಶಿಫಾರಸ್ಸನ್ನು ಮಾಡಲು ಹಾಗೂ ವರದಿ ಸಲ್ಲಿಸಲು ವಿಶ್ವವಿದ್ಯಾಲಯದಿಂದ ಸಮಿತಿಯನ್ನು ರಚಿಸಲಾಗಿತ್ತು.<br>ಸಮಿತಿಯು ಕೆಳಕಂಡಂತೆ ಶಿಫಾರಸನ್ನು ನೀಡಿರುತ್ತದೆ.<br><br>**After exhaustive deliberation and discussion in the meeting held today, the committee unanimously decided to recommended for considering approval of the admission of these 210 student subject to their NEET eligibility, and final verdict of the pending court matters as one time measure on humanitarian grounds since career of these students is at stake.**<br><br>ಸಮಿತಿ ಶಿಫಾರಸಿನಂತೆ ವಿಶ್ವವಿದ್ಯಾಲಯವು 210 ವಿದ್ಯಾರ್ಥಿಗಳ ಪ್ರವೇಶಾನುಮೋದನೆ ಮಾಡಿರುತ್ತದೆ. ನಂತರ ದಿನಾಂಕ: 31.01.2023ರಲ್ಲಿ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಪತ್ರದ ಆದೇಶದಂತೆ 210 ವಿದ್ಯಾರ್ಥಿಗಳ ಪ್ರವೇಶಾನುಮೋದನೆಯನ್ನು ತಡೆಹಿಡಿಯಲಾಗಿದ್ದು ಕೇವಲ ಪರೀಕ್ಷೆಯನ್ನು ಬರೆಯಲು ಅನುಮತಿ ನೀಡಲಾಗಿದೆ ಎಂಬ ಮಾಹಿತಿಯನ್ನು ಸಿಂಡಿಕೇಟ್ ಸದಸ್ಯರ ಗಮನಕ್ಕೆ ತರಲಾಯಿತು.<br><br>ಗೌರವಾನ್ವಿತ ಕುಲಪತಿಗಳು ಸಿಂಡಿಕೇಟ್ ಸದಸ್ಯರನ್ನು ಉದ್ದೇಶಿಸಿ ಈ ವಿಚಾರದಲ್ಲಿ ವಿಶ್ವವಿದ್ಯಾಲಯವು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ತಮ್ಮಗಳ ಅಭಿಪ್ರಾಯವನ್ನು ನೀಡಲು ಕೋರಿದರು. ಎಲ್ಲಾ ಸಿಂಡಿಕೇಟ್ ಸದಸ್ಯರು ವಿಶ್ವವಿದ್ಯಾಲಯವು ತೆಗೆದುಕೊಂಡಿರುವ ಕ್ರಮವನ್ನು ಅನುಮೋದಿಸಿದರು. |
| ಸಿಂಡಿಕೇಟ್ ನಿರ್ಣಯ | ಸುದೀರ್ಘ ಚರ್ಚೆಯ ನಂತರ ಎಲ್ಲಾ ಸಿಂಡಿಕೇಟ್ ಸದಸ್ಯರು ವಿಶ್ವವಿದ್ಯಾಲಯವು ತೆಗೆದುಕೊಂಡಿರುವ ಕ್ರಮವನ್ನು ಅನುಮೋದಿಸಿದರು. |
| (9) | To discuss regarding files sent to Government regarding three Medical Colleges under Section 13 (2) of RGUHS Act, against the proceedings of previous Syndicate meeting. |
| ಚರ್ಚೆ | 2022-23 ಮತ್ತು 2023-24ನೇ ಶೈಕ್ಷಣಿಕ ವರ್ಷಕ್ಕೆ ಸ್ನಾತ್ತಕೋತ್ತರ ಪದವಿ ಸೀಟುಗಳ ಸಂಖ್ಯೆ ಹೆಚ್ಚಳ, ಹೊಸ ಕೋರ್ಸ್‌ಗಳನ್ನು ಆರಂಭಿಸಲು ಮತ್ತು ಅಫಿಲಿಯೇಶನ್‌ನ ಮುಂದುವರಿಕೆಗಾಗಿ ಅರ್ಜಿಯನ್ನು ದಿ.20.01.2022 ರಂದು |

ಕುಲಸಚಿವರು ಕುಲಪತಿಗಳು

| | |
|---|---|
| | ಕರೆಯಲಾಗಿರುತ್ತದೆ. ಅಧಿಸೂಚನೆಯ ಪ್ರಕಾರ, ಬೆಂಗಳೂರಿನ ವೈದೇಹಿ ವೈದ್ಯಕೀಯ ಕಾಲೇಜು, ಬೆಂಗಳೂರು, ಎಂವಿಜೆ ವೈದ್ಯಕೀಯ ಕಾಲೇಜು ಮತ್ತು ರಾಯಚೂರಿನ ನವೋದಯ ವೈದ್ಯಕೀಯ ಕಾಲೇಜುಗಳು ಇತರ ವೈದ್ಯಕೀಯ ಕಾಲೇಜುಗಳೊಂದಿಗೆ ವಿವಿಧ ಪಿಜಿ ವೈದ್ಯಕೀಯ ಕೋರ್ಸ್‌ಗಳ ಸೀಟುಗಳ ಸಂಖ್ಯೆ ಹೆಚ್ಚಳಕ್ಕಾಗಿ ಅರ್ಜಿ ಸಲ್ಲಿಸಿದ್ದು. ಇದಕ್ಕೆ ಸಂಬಂದಿಸಿದಂತೆ ಅರ್ಜಿ ಸಲ್ಲಿಸಿರುವ ಎಲ್ಲಾ ವೈದ್ಯಕೀಯ ಕಾಲೇಜುಗಳಿಗೆ ಎಲ್‌ಐಸಿ ತಂಡಗಳು ಪರಿಶೀಲನೆ ನಡೆಸಿ ವರದಿಯನ್ನು ನೀಡಿವೆ.<br><br>ವರದಿಗಳನ್ನು ಸಿ.ಎ.ಸಿ. ಸಭೆಯ ಮುಂದೆ ಮಂಡಿಸಲಾಗಿದ್ದು ಮತ್ತು ನಂತರ ಸಿ.ಎ.ಸಿ. ಯ ಶಿಫಾರಸಿನೊಂದಿಗೆ 16.07.2022 ರಂದು ನಡೆದ 171 ನೇ ಸಿಂಡಿಕೇಟ್ ಮುಂದೆ ಮಂಡಿಸಲಾಗಿರುತ್ತದೆ. ಸಿಂಡಿಕೇಟ್ ತನ್ನ ಸಭೆಯಲ್ಲಿ ಮೇಲಿನ ಕಾಲೇಜುಗಳಿಗೆ ಎಲ್‌ಐಸಿ ಮತ್ತು ಸಿಎಸಿ ಅನುಮೋದಿಸಿದ ಪಿಜಿ ವೈದ್ಯಕೀಯ ಕೋರ್ಸ್‌ಗಳ ಹೆಚ್ಚುವರಿ ಸೀಟುಗಳನ್ನು ಕಡಿಮೆ ಮಾಡಿ ತೀರ್ಮಾನವನ್ನು ಕೈಗೊಂಡಿರುತ್ತಾರೆ. ಇದನ್ನು ಅನುಮೋದನೆಗಾಗಿ ದಿ.18.07.2022 ರಂದು ಸರ್ಕಾರಕ್ಕೆ ಕಳುಹಿಸಲಾಗಿದೆ.<br><br>ಏತನ್ಮಧ್ಯೆ ಮೇಲಿನ 3 ಕಾಲೇಜುಗಳು W.P.No.14961/2022, 15341/2022 ಮತ್ತು 16220/2022 ರಲ್ಲಿ ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯವನ್ನು ಸಂಪರ್ಕಿಸಿದ್ದು, ಕರ್ನಾಟಕದ ಗೌರವಾನ್ವಿತ ಹೈಕೋರ್ಟ್ ಸಿಂಡಿಕೇಟ್ ನಿರ್ಧಾರವನ್ನು ರದ್ದುಗೊಳಿಸಿದೆ ಮತ್ತು ಎಲ್‌ಐಸಿ ಮತ್ತು ಸಿಎಸಿ ಶಿಫಾರಸಿನ ಪ್ರಕಾರ ಪಿಜಿ ವೈದ್ಯಕೀಯ ಕೋರ್ಸ್‌ಗಳ ಸೀಟುಗಳ ಹೆಚ್ಚಳದಲ್ಲಿ ಹೊಸ ನಿರ್ಧಾರವನ್ನು ತೆಗೆದುಕೊಳ್ಳುವಂತೆ ಆದೇಶಿಸಿದೆ.<br><br>ಗೌರವಾನ್ವಿತ ಹೈಕೋರ್ಟಿನ ಆದೇಶದಂತೆ ಈ ವಿಷಯವನ್ನು ಪುನ: ಸಿಂಡಿಕೇಟ್ ಮುಂದೆ ಮಂಡಿಸಲಾಗಿದ್ದು, 20.10.2022 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಮೇಲಿನ ಕಾಲೇಜುಗಳನ್ನು ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಎಲ್.ಐ.ಸಿ ತಂಡವನ್ನು ರಚಿಸಿ ಮರುಪರಿಶೀಲಿಸಲು ನಿರ್ಧರಿಸಲಾಗಿರುತ್ತದೆ.<br><br>ಪುನ: ಹೊಸದಾಗಿ ನಿರ್ಧಾರವನ್ನು ತೆಗೆದುಕೊಳ್ಳಲು 24.11.2022 ರಂದು ನಡೆದ ಸಿಂಡಿಕೇಟ್ ಮುಂದೆ ವಿಷಯವನ್ನು ಮತ್ತೊಮ್ಮೆ ಮಂಡಿಸಲಾಗಿದ್ದು, ವಿಸ್ತೃತ |

ಕುಲಸಚಿವರು ಕುಲಪತಿಗಳು

| | |
|---|---|
| | ಚರ್ಚೆಯ ನಂತರ 16.07.2022 ರಂದು ನಡೆದ ಸಿಂಡಿಕೇಟ್‌ನಲ್ಲಿ ತೆಗೆದುಕೊಂಡ ನಿರ್ಧಾರವನ್ನು ಎತ್ತಿ ಹಿಡಿದಿರುತ್ತದೆ. ಅದರಂತೆ ದಿ.07.12.2022 ರಂದು ಸಿಂಡಿಕೇಟ್ ತೀರ್ಮಾನದಂತೆ ಮೇಲಿನ ಕಾಲೇಜುಗಳಿಗೆ ಪತ್ರ ಬರೆದು ಸಭೆಯ ನಿರ್ಧಾರವನ್ನು ತಿಳಿಸಲಾಗಿರುತ್ತದೆ.<br><br>ರಾಷ್ಟ್ರೀಯ ವೈದ್ಯಕೀಯ ಪರಿಷತ್ತು ದಿನಾಂಕ 15.12.2022ರಲ್ಲಿ ಮತ್ತೊಮ್ಮೆ ವೈದ್ಯಕೀಯ ಕಾಲೇಜುಗಳಿಗೆ ಸೀಟು ಹೆಚ್ಚಳದ ಬಗ್ಗೆ ಅರ್ಜಿ ಸಲ್ಲಿಸಲು ದಿನಾಂಕ 23.12.2022ರವರೆಗೂ ಅವಧಿಯನ್ನು ವಿಸ್ತರಿಸಿ ಸುತ್ತೋಲೆ ಹೊರಡಿಸಿರುತ್ತಾರೆ.<br><br>ಹಾಗೆಯೇ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಯವರು ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರನ್ನು ಸಂಪರ್ಕಿಸಿ ಸೀಟುಗಳ ಹೆಚ್ಚಳದ ಬಗ್ಗೆ ನ್ಯಾಯಾಲಯವು ಆದೇಶಿಸಿರುವ ಕಾಲೇಜುಗಳ ಕಡತಗಳನ್ನು ಸರ್ಕಾರಕ್ಕೆ ಕಳುಹಿಸುವಂತೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಸೂಚಿಸಿದ್ದಾರೆ ಎಂದು ತಿಳಿಸಿರುತ್ತಾರೆ. ಅದರಂತೆ ಉಚ್ಛ ನ್ಯಾಯಾಲಯದ ಆದೇಶ, ರಾಷ್ಟ್ರೀಯ ವೈದ್ಯಕೀಯ ಪರಿಷತ್ತಿಗೆ ಅರ್ಜಿ ಸಲ್ಲಿಸಲು ವಿಸ್ತರಿಸಿರುವ ಅವಧಿಯ ಪರಿಗಣನೆ ಹಾಗೂ ಮಾನ್ಯ ವೈದ್ಯಕೀಯ ಸಚಿವರ ಸೂಚನೆ ಪಾಲಿಸಲು ಈ ಮೇಲ್ಕಾಣಿಸಿದ ಮೂರು ಕಾಲೇಜುಗಳ ಸೀಟುಗಳನ್ನು ಹೆಚ್ಚಿಸುವ ಪ್ರಸ್ತಾವನೆಯನ್ನು ಸಿಎಸಿ ಅಂಗೀಕರಿಸಿದ ರೀತಿಯಲ್ಲಿಯೇ ಯಥಾವತ್ತಾಗಿ ಸರ್ಕಾರಕ್ಕೆ 13(2)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರದಡಿ ಕಳುಹಿಸಲಾಯಿತು. ಈ ವಿಷಯವನ್ನು ಮೌಲ್ಯಮಾಪನ ಕುಲಸಚಿವರಾದ ಡಾ. ರಾಮಕೃಷ್ಣ ರೆಡ್ಡಿಯವರು ಕೂಲಂಕುಷವಾಗಿ ವಿವರಿಸಿ ಸಭೆಯಲ್ಲಿ ದೃಢೀಕರಿಸಿದರು.<br><br>ಈ ವಿಷಯವನ್ನು ಗೌರವಾನ್ವಿತ ಕುಲಪತಿಗಳು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದರು. |
| ಸಿಂಡಿಕೇಟ್ ನಿರ್ಣಯ | Ratified. |

ಸಭೆಯಲ್ಲಿ ಮೇಲ್ಕಂಡ ವಿಷಯವನ್ನು ಸಮಗ್ರವಾಗಿ ಚರ್ಚಿಸಿ ತೀರ್ಮಾನವನ್ನು ತೆಗೆದುಕೊಂಡ ನಂತರ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

**ಕುಲಸಚಿವರು** **ಕುಲಪತಿಗಳು**

ಗೆ
ಸಿಂಡಿಕೇಟ್ ಸದಸ್ಯರುಗಳು/ ಪದನಿಮಿತ್ತ ಸದಸ್ಯರು.

**ಕುಲಸಚಿವರು** **ಕುಲಪತಿಗಳು**

<u>ಪ್ರತಿಗಳು : -</u>

1. ಘನತೆವೆತ್ತ ರಾಜ್ಯಪಾಲರ ಆಪ್ತ ಕಾರ್ಯದರ್ಶಿಗಳು, ರಾಜ್ಯಪಾಲರ ಕಾರ್ಯಾಲಯ, ರಾಜಭವನ, ಬೆಂಗಳೂರು
2. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ), ವಿಧಾನಸೌಧ, ಬೆಂಗಳೂರು
3. ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ), ವಿಕಾಸ ಸೌಧ, ಬೆಂಗಳೂರು
4. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
5. ಆಪ್ತ ಸಹಾಯಕರುಗಳು, ಕುಲಪತಿಗಳು / ಕುಲಸಚಿವರು/ ಕುಲಸಚಿವರು (ಮೌಲ್ಯಮಾಪನ)/ ಹಣಕಾಸು ಅಧಿಕಾರಿಗಳು, ರಾ.ಗಾ.ಆ.ವಿ.ವಿಶ್ವವಿದ್ಯಾಲಯ, ಬೆಂಗಳೂರು
6. ಕಛೇರಿ ಪ್ರತಿ

ಕುಲಸಚಿವರು

ಕುಲಪತಿಗಳು